# ಹಂಪಿ ಟೈಮ್ಸ್


HAMPI TIMES
ಕನ್ನಡ ದಿನಪತ್ರಿಕೆ
KANNADA DAILY
ಸಂಪಾದಕ: ಬಸಾಪುರ ಬಸವರಾಜ
EDITOR: BASAPUR BASAVARAJA
epaper.hampitimes.com | e-mail: hampitimes@gmail.com | M:94486 33038 Reg.No.PMG/KA/NK/BLY/01/2024-2026

ಸಂಪುಟ:02 Volume:02 • ಸಂಚಿಕೆ: 166 Issue: 166 • ಪಿ.ಆರ್.ಜಿ.ಐ.ನಂ.:KARKAN/2023/88055 PRGI No:KARKAN/2023/88055 • ವಿಜಯನಗರ VIJAYANAGARA • 02.01.2025 • ಗುರುವಾರ Thursday • ಪುಟ:04 Page:04 • ಬೆಲೆ:2 Rs:2







## ಮೈಕ್ರೋ ನ್ಯೂಸ್

### ಫೆ.28 ರವರೆಗೆ ವಿಕಲಚೇತನರ ಹಾಲಿ ಬಸ್‌ಪಾಸ್‌ಗೆ ಮಾನ್ಯತೆ : ನವೀಕರಣಕ್ಕೆ ಅವಕಾಶ

**ಹಂಪಿ ಟೈಮ್ಸ್ ಹೊಸಪೇಟೆ:** ವಿಕಲಚೇತನರ ಹಾಲಿ ಬಸ್‌ಪಾಸ್‌ಗಳ ಮಾನ್ಯತೆಯನ್ನು 2025ರ ಫೆ.28 ರವರೆಗೆ ಅವಧಿ ವಿಸ್ತರಿಸಿ ನವೀಕರಣಕ್ಕೆ ಅವಕಾಶ ನೀಡಲಾಗಿದೆ ಎಂದು ಕಲ್ಯಾಣ ರಸ್ತೆ ಸಾರಿಗೆ ಹೊಸಪೇಟೆ ವಿಭಾಗದ ವಿಭಾಗೀಯ ನಿಯಂತ್ರಕ ತಿಮ್ಮಾರೆಡ್ಡಿ ಹೀರಾ ತಿಳಿಸಿದ್ದಾರೆ. 2025 ನೇ ಸಾಲಿನ ವಿಕಲಚೇತನರ ರಿಯಾಯಿತಿ ಬಸ್ ಪಾಸ್‌ಗಳನ್ನು ಸೇವಾಸಿಂಧು ಪೋರ್ಟ್ಲ್ ಮೂಲಕ ಅರ್ಜಿ ಸಲ್ಲಿಸಿ ನವೀಕರಿಸಿ ಕೊಳ್ಳಲು ಸಾಕಾಷ್ಟು ಕಾಲಾವಕಾಶ ನೀಡುವ ಉದ್ದೇಶದಿಂದ 2024 ನೇ ಸಾಲಿನಲ್ಲಿ ವಿತರಿಸಲಾಗಿರುವ ಮತ್ತು ಡಿ.31 ರವರೆಗಿದ್ದ ಮಾನ್ಯತೆಯ ಅವಧಿಯನ್ನು ಫೆ.28 ರವರೆಗೆ ವಿಸ್ತರಣೆ ಮಾಡಿದ್ದು ಪಾಸ್ ತೋರಿಸಿ ನಿಗಮದ ಬಸ್ಸುಗಳಲ್ಲಿ ಪ್ರಯಾಣಿಸಲು ಅವಕಾಶ ಕಲ್ಪಿಸಲಾಗಿದೆ ಎಂದು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

### ಅಧ್ಯಕ್ಷರಾಗಿ ಹುಲಿಕಟ್ಟಿ ಎಚ್. ಪಕ್ಕೀರಪ್ಪ, ಉಪಾಧ್ಯಕ್ಷರಾಗಿ ಪಿರೇ ನಾಯ್ಕ್ ಆಯ್ಕೆ

**ಹಂಪಿ ಟೈಮ್ಸ್ ಹರಪನಹಳ್ಳಿ.** ಹಾರಕನಾಳು ವಿವಿದ್ಧೋದೇಶ ಪ್ರಾಥಮಿಕ ಗ್ರಾಮೀಣ ಕೃಷಿ ಸಹಕಾರ ಸಂಘದ ನಡೆದ ಅಧ್ಯಕ್ಷ ಉಪಾಧ್ಯಕ್ಷರ ಚುನಾವಣೆಯಲ್ಲಿ ಕಾಂಗ್ರೆಸ್ ಬೆಂಬಲಿತ ಹುಲಿಕಟ್ಟಿ ಎಚ್ ಫಕೀರಪ್ಪ ಅಧ್ಯಕ್ಷರಾಗಿ 10 ಮತಗಳ ಪಡೆದು ಚುನಾಯಿತರಾದರೆ ಹಾರಕನಾಳ ದೊಡ್ಡ ತಾಂಡ ಪಿರೇ ನಾಯ್ಕ್ ಉಪಾಧ್ಯಕ್ಷರಾಗಿ ಅವಿರೋಧವಾಗಿ ಆಯ್ಕೆಯಾದರು.

ಈ ಸಂದರ್ಭದಲ್ಲಿ ತಾಲೂಕು ಪಂಚಾಯಿತಿ ಮಾಜಿ ಸದಸ್ಯ ಹುಲಿಕಟ್ಟಿ ಹೆಚ್.ಚಂದ್ರಪ್ಪ ಕಾಂಗ್ರೆಸ್ ಪಕ್ಷದ ಮುಖಂಡ ಅಗ್ರಹಾರಕ್ಕೆ ಅಶೋಕ್, ಹುಲಿಕಟ್ಟಿ ಕೆ.ಭಾಷಾ ಸಾಬ್, ಹಾರಕನಾಳ ಸಹಕಾರ ಸಂಘದ ನೂತನ ಹಿರಿಯ ಸದಸ್ಯ ಹೆಚ್.ಎಂ. ಬಸವರಾಜಯ್ಯ, ಡಿ.ಜಿ.ಪ್ರಕಾಶ್ ಗೌಡ, ಚನ್ನಳ್ಳಿ ಗ್ರಾಮದ ಕಾಂಗ್ರೆಸ್ ಮುಖಂಡ ಶಶಿಕುಮಾರ್ ನಾಯಕ್, ಹೆಚ್.ಬೀರಪ್ಪ, ನಿರ್ದೇಶಕರಾದ ಎಲ್.ಬಿ.ಹಾಲೇಶ ನಾಯಕ್, ಪಿ.ಗಂಗಾಧರಪ್ಪ, ಕೆ.ನಿಂಗಪ್ಪ, ರಾಮ ನಾಯಕ್, ಭೋವಿ ಹಾಲೇಶ್, ಪಂಪನಾಯಕ್, ಟಿ.ಹಾಲೇಶ್, ಟಿ.ಲಕ್ಕೇಶ್, ಬಿ.ಕೃಷ್ಣಪ್ಪ ಅನೇಕ ಕಾಂಗ್ರೆಸ್ ಮುಖಂಡರು ಉಪಸ್ಥಿತರಿದ್ದರು.

# ಆಧುನಿಕತೆ ಯುಗದಲ್ಲಿ ನಶಿಸುತ್ತಿರುವ ಶಿಲ್ಪಕಲೆ ಪರಂಪರೆ ಪೋಷಣೆ ಅಗತ್ಯ

## ಅಪರ ಜಿಲ್ಲಾಧಿಕಾರಿ ಇ.ಬಾಲಕೃಷ್ಣಪ್ಪ ಹೇಳಿಕೆ | ಜಕಣಾಚಾರಿ ಸಂಸ್ಮರಣೆ


**ಹಂಪಿ ಟೈಮ್ಸ್ ಹೊಸಪೇಟೆ**

ದೇಶದ ಶಿಲ್ಪಕಲೆ ಶ್ರೀಮಂತಿಕೆಯಲ್ಲಿ ಅಮರ ಶಿಲ್ಪಿ ಜಕಣಾಚಾರಿಯವರು ಅದ್ಭುತ ಕೊಡುಗೆ ನೀಡಿದ್ದಾರೆ ಎಂದು ಅಪರ ಜಿಲ್ಲಾಧಿಕಾರಿ ಇ.ಬಾಲಕೃಷ್ಣಪ್ಪ ಹೇಳಿದರು.




ನಗರದ ಜಿಲ್ಲಾಧಿಕಾರಿಗಳ ಕಚೇರಿ ಸಭಾಂಗಣದಲ್ಲಿ ಏರ್ಪಡಿಸಿದ್ದ ಅಮರಶಿಲ್ಪಿ ಜಕಣಾಚಾರಿ ಸಂಸ್ಮರಣಾ ದಿನಾಚರಣೆ ಕಾರ್ಯಕ್ರಮದಲ್ಲಿ ಭಾವಚಿತ್ರಕ್ಕೆ ಪುಷ್ಪ ನಮನ ಸಲ್ಲಿಸಿ ಬುಧವಾರ ಅವರು ಮಾತನಾಡಿದರು. ಬೇಲೂರು, ಹಳೇಬೀಡು, ಸೋಮನಾಥಪುರದಲ್ಲಿ ಶಿಲ್ಪಕಲೆಗಳು ವಿಶ್ವಕರ್ಮರ ಪ್ರಸ್ತುತೆಯನ್ನು ಬಿಂಬಿಸುತ್ತವೆ. ಜಕಣಾಚಾರಿಯವರು ಅವರ ಜೀವನವನ್ನು ಶಿಲ್ಪಕಲೆಗೆ ಮುಡುಪಾಗಿಟ್ಟಿದ್ದರು. ಅವರ ಕೆತ್ತನೆಯ ಚೆನ್ನಕೇಶವ ದೇವಾಲಯ ರಾಷ್ಟ್ರೀಯ ಮತ್ತು ಅಂತರಾಷ್ಟ್ರೀಯ ಮಟ್ಟದಲ್ಲಿ ಪ್ರಸಿದ್ಧಿ ಪಡೆದಿವೆ. ಅಧುನಿಕ ಯುಗದಲ್ಲಿ ಶಿಲ್ಪಕಲೆಗಳು ನಶಿಸುತ್ತಿವೆ. ಅಮರಶಿಲ್ಪಿ ಜಕಣಾಚಾರಿಯವರ ಪರಂಪರೆಯನ್ನು ಎಲ್ಲರೂ ಪೋಷಿಸುವ ಅಗತ್ಯವಿದೆ. ವಿಶ್ವಕರ್ಮರ ಶಿಲ್ಪಕಲೆಗಳು ಅಮರವಾಗಿರಲಿವೆ. ಈ ನಿಟ್ಟಿನಲ್ಲಿ ಜಕಣಾಚಾರಿಯವರನ್ನು ಶಿಲ್ಪಕಲೆಯ ಕುಶಲತೆಯನ್ನು ಸ್ಮರಿಸುವ ಅಗತ್ಯವಿದೆ ಎಂದರು.

ಈ ವೇಳೆ ಜಿಪಂನ ಉಪಕಾರ್ಯದರ್ಶಿ ಭೀಮಪ್ಪ ಲಾಳಿ, ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಸಹಾಯಕ ನಿರ್ದೇಶಕ ಸಿದ್ದಲಿಂಗೇಶ್ ರಂಗಣ್ಣನವರ್ ಸೇರಿದಂತೆ ವಿವಿಧ ಇಲಾಖೆಯ ಅಧಿಕಾರಿಗಳು ಇದ್ದರು.



## ಜಿಲ್ಲಾಡಳಿತದಿಂದ ಪುಷ್ಪ ನಮನ




**ಕೊಪ್ಪಳ:** ವಿಶ್ವಕರ್ಮ ಅಮರ ಶಿಲ್ಪಿ ಜಕಣಾಚಾರಿ ಸಂಸ್ಕಾರಣಾ ದಿನಾಚರಣೆ ಅಂಗವಾಗಿ ಕೊಪ್ಪಳ ಜಿಲ್ಲಾಡಳಿತದ ವತಿಯಿಂದ ವಿಶ್ವ ವಿಖ್ಯಾತ ಅಮರ ಶಿಲ್ಪಿ ಜಕಣಾಚಾರಿ ಅವರ ಭಾವಚಿತ್ರಕ್ಕೆ ಜನವರಿ 1 ರಂದು ಪುಷ್ಪ ನಮನ ಸಲ್ಲಿಸಲಾಯಿತು.

ಜಿಲ್ಲಾಡಳಿತ ಹಾಗೂ ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಸಹಯೋಗದಲ್ಲಿ ಬುಧವಾರ ವಿಶ್ವಕರ್ಮ ಅಮರ ಶಿಲ್ಪಿ ಜಕಣಾಚಾರಿ ಸಂಸ್ಕಾರಣಾ ದಿನಾಚರಣೆಯನ್ನು ಜಿಲ್ಲಾಡಳಿತ ಕಛೇರಿ ಸಭಾಂಗಣದಲ್ಲಿ ಸರಳವಾಗಿ ಆಚರಿಸಲಾಯಿತು. ಅಪರ ಜಿಲ್ಲಾಧಿಕಾರಿ ಸಿದ್ರಾಮೇಶ್ವರ ಅವರು ವಿಶ್ವ ವಿಖ್ಯಾತ ಅಮರ ಶಿಲ್ಪಿ ಜಕಣಾಚಾರಿಯವರ ಭಾವಚಿತ್ರಕ್ಕೆ ಪುಷ್ಪಾರ್ಪಣೆ ಮಾಡಿ ಗೌರವ ನಮನ ಸಲ್ಲಿಸಿದರು.

ಈ ಸಂದರ್ಭದಲ್ಲಿ ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಸಹಾಯಕ ನಿರ್ದೇಶಕ ಕೊಟ್ರೇಶ್ ಮರಬನಳ್ಳಿ, ಚುನಾವಣಾ ಶಾಖೆಯ ತಹಶೀಲ್ದಾರ ರವಿ ವಸ್ತ್ರದ್, ವಿಶ್ವಕರ್ಮ ಸಮಾಜದ ಮುಖಂಡರಾದ ದೇವೆಂದ್ರಪ್ಪ ಬಡಿಗೇರ, ಈಶಪ್ಪ ಬಡಿಗೇರ, ರುದ್ರಪ್ಪ ಬಡಿಗೇರ, ದೇವಪ್ಪ ಬಡಿಗೇರ, ಕಲ್ಲಪ್ಪ ಬಡಿಗೇರ, ನಿಂಗಪ್ಪ ಬಡಿಗೇರ, ನಿಂಗಪ್ಪ ಬಡಿಗೇರ ಹಾಗೂ ಮತ್ತಿತರರು ಸೇರಿದಂತೆ ವಿವಿಧ ಇಲಾಖೆಗಳ ಅಧಿಕಾರಿಗಳು ಮತ್ತು ಸಿಬ್ಬಂದಿ ಉಪಸ್ಥಿತರಿದ್ದರು.

## ಆನಂದ ಬಾಣ




## ಜ.03 ರಂದು ಬಳ್ಳಾರಿಯಲ್ಲಿ ಬೃಹತ್ ಉದ್ಯೋಗ ಮೇಳ

**ಹಂಪಿ ಟೈಮ್ಸ್ ಬಳ್ಳಾರಿ**

ಕೌಶಲ್ಯಾಭಿವೃದ್ಧಿ, ಉದ್ಯಮಶೀಲತೆ ಮತ್ತು ಜೀವನೋಪಾಯ ಇಲಾಖೆ, ಜಿಲ್ಲಾ ಕೌಶಲ್ಯಾಭಿವೃದ್ಧಿ ಕಚೇರಿ ಇವರ ಸಂಯುಕ್ತಾಶ್ರಯದಲ್ಲಿ ಕೌಶಲ್ಯ ಮತ್ತು ರೋಜ್‌ಗಾರ್ ಮೇಳ ಅಡಿ ಜ.03 ರಂದು ಬೆಳಿಗ್ಗೆ 10 ಗಂಟೆಗೆ ನಗರದ ಡಾ.ರಾಜ್‌ಕುಮಾರ್ ರಸ್ತೆಯ ಶ್ರೀಮತಿ ಸರಳಾದೇವಿ ಸತೀಶ್ಚಂದ್ರ ಅಗರ್ವಾಲ್ ಸರ್ಕಾರಿ ಪ್ರಥಮ ದರ್ಜೆ ಕಾಲೇಜು (ಸ್ವಾಯತ್ತ), ಇಲ್ಲಿ ಬೃಹತ್ ಉದ್ಯೋಗ ಮೇಳ ಆಯೋಜಿಸಲಾಗಿದೆ.

ಉದ್ಯೋಗ ಮೇಳದಲ್ಲಿ ಸುಮಾರು 40 ರಿಂದ 50 ಕಂಪನಿಗಳು ಭಾಗವಹಿಸಲಿವೆ. ಎಸ್.ಎಸ್.ಎಲ್.ಸಿ, ಪಿ.ಯು.ಸಿ, ಐ.ಟಿ.ಐ, ಡಿಪ್ಲೋಮಾ, ಪದವಿ ಮತ್ತು ಸ್ನಾತಕೋತ್ತರ ಪದವಿ ವಿದ್ಯಾರ್ಹತೆವುಳ್ಳ ಉದ್ಯೋಗಾಕಾಂಕ್ಷಿಗಳು ಪೂರಕ ದಾಖಲಾತಿಗಳೊಂದಿಗೆ ಮೇಳದಲ್ಲಿ ಭಾಗವಹಿಸಬಹುದಾಗಿದೆ.

ಇಲಾಖೆಯಿಂದ ಸೃಜಿಸಲಾಗಿರುವ https://forms.gle/YhbVhDQqMmHRF1uV7 ರಲ್ಲಿ ನೋಂದಾಯಿಸಿಕೊಳ್ಳಬಹುದು. ಹೆಚ್ಚಿನ ಮಾಹಿತಿಗಾಗಿ ಜಿಲ್ಲಾ ಕೌಶಲ್ಯ ಮಿಷನ್ ಕಚೇರಿ ಅಥವಾ ದೂ.08392-294230 ಮತ್ತು ಮೊ.9844444958, 6361607038 ಗೆ ಸಂಪರ್ಕಿಸಬಹುದು ಎಂದು ಜಿಲ್ಲಾ ಕೌಶ್ಯಲಾಭಿವೃದ್ಧಿ ಅಧಿಕಾರಿ ಪ್ರಾಣೇಶ್ ತಿಳಿಸಿದ್ದಾರೆ.

## ಕೊಟ್ಟೂರು ಕೃಷಿಕ ಸಮಾಜದ ಅಧ್ಯಕ್ಷರಾಗಿ ದೊಡ್ಡಮನಿ ನಾಗೇಶ ಅವಿರೋಧ ಆಯ್ಕೆ

**ಹಂಪಿ ಟೈಮ್ಸ್ ಕೊಟ್ಟೂರು.**

ಕೊಟ್ಟೂರು ಕೃಷಿ ಇಲಾಖೆಯಲ್ಲಿ ಮಂಗಳವಾರ ನಡೆದ ತಾಲೂಕಿನ ಕೃಷಿಕ ಸಮಾಜದ ಚುನಾವಣೆಯಲ್ಲಿ ಅಧ್ಯಕ್ಷರಾಗಿ ದೊಡ್ಡಮನಿ ನಾಗೇಶ್ ಉಪಾಧ್ಯಕ್ಷರಾಗಿ ಕೆ.ಕೊಟ್ರೇಶ್ ಅವಿರೋಧವಾಗಿ ಆಯ್ಕೆಯಾಗಿದ್ದಾರೆ ಎಂದು ಕೊಟ್ಟೂರು ಕೃಷಿ ಇಲಾಖೆ ಸಹಾಯಕ ಅಧಿಕಾರಿ ಶ್ಯಾಮ ಸುಂದರ .ಡಿ ಘೋಷಿಸಿದರು.

ಖಜಾಂಜಿಯಾಗಿ ಜೆ ಅಂಜನಪ್ಪ, ಪ್ರಧಾನ ಕಾರ್ಯದರ್ಶಿಯಾಗಿ ಪಿ. ಸಾಬುಲಿ, ಜಿಲ್ಲಾ ಪ್ರತಿನಿಧಿಯಾಗಿ ಜೆ ಮರಳು ಸಿದ್ದಪ್ಪ ಆಯ್ಕೆಯಾಗಿದ್ದಾರೆ. ಈ ವೇಳೆ ನಿರ್ದೇಶಕರಾದ ಪಿ.ಹೆಚ್ .ಸಣ್ಣರಾಮಪ್ಪ. ಡಿ.ಚೌಡಪ್ಪ, ಎನ್.ಭರಮಣ್ಣ ಹೊಸಕೋಡಿಹಳ್ಳಿ ಕೃಷ್ಣಪ್ಪ, ಲೊಟ್ಟಿನಕೆರೆ ಮಂಜುನಾಥ್ .ಪಿ .ಹೆಚ್. ಜಾನಕಿರಾಮಣ್ಣ, ಪೂಜಾರಿ ಚೌಡಪ್ಪ, ಗಿತ್ತ ಮಂಜುನಾಥ್, ಕೆ.ತೋಪರಾಜ್ ಹಾಗೂ ಪಿ ಹೆಚ್ ರಾಘವೇಂದ್ರ ಮಾಜಿ ಅಧ್ಯಕ್ಷರು ಹ್ಯಾಳ್ಯ ಗ್ರಾ. ಪಂ. ಕೊಟ್ಟೂರ ಬ್ಲಾಕ್ ಕಾಂಗ್ರೇಶ್ ಕಾರ್ಮಿಕ ವಿಭಾಗದ ಅಧ್ಯಕ್ಷರು. ಪಿ.ಕೆ.ಇಂದ್ರಜಿತ್, ಕೆ.ಎಸ್ ನಾಗರಾಜ ಗೌಡ, ವಿ. ಡಿ.ಅಂಜಿನಪ್ಪ, ಎಂ.ಯರಿಸ್ವಾಮಿ ಸೇರಿದಂತೆ ಅನೇಕ ರೈತರು ಇದ್ದರು.

ಕೃಷಿ ಇಲಾಖೆಯ ಸಿಬ್ಬಂದಿ ತಿಮ್ಮಪ್ಪ ಎಸ್.ಆಶಾ, ಕೊಟ್ರೆಶ . ಸುರೇಶ್. ಪ್ರವೀಣ್.ರಾಜ ಹಾಜರಿದ್ದರು.






# ಸಹಕಾರಿ ಕ್ಷೇತ್ರದ ಆಯ್ಕೆ ಮುಂದಿನ ಚುನಾವಣೆ ದಿಕ್ಸೂಚಿ

## ಕೆಎಂಎಫ್ ಅಧ್ಯಕ್ಷ ಎಸ್.ಭೀಮನಾಯ್ಕ ಇಂಗಿತ | ಕಾಂಗ್ರೆಸ್ ಬೆಂಬಲಿತರ ಜಯಭೇರಿ



**ಹಂಪಿ ಟೈಮ್ಸ್ ಹಗರಿಬೊಮ್ಮನಹಳ್ಳಿ**

ರಾಜ್ಯದಲ್ಲಿನ ಸಹಕಾರಿ ಕ್ಷೇತ್ರವನ್ನು ಬಲಪಡಿಸುವ ನಿಟ್ಟಿನಲ್ಲಿ ಕೇಂದ್ರದ ಬಾಕಿ 2600 ಕೋಟಿ ರೂ.ಅನುದಾನ ಬಿಡುಗಡೆಗೆ ಕೇಂದ್ರದ ವಿತ್ತ ಸಚಿವೆ ನಿರ್ಮಲಾ ಸೀತಾರಾಮನ್ ಅವರನ್ನು ಭೇಟಿಯಾಗಿ ಮನವಿ ಸಲ್ಲಿಸಿದರೂ ಕೇಂದ್ರ ಸರಕಾರ ರಾಜ್ಯದ ಬಗ್ಗೆ ತಾರತಮ್ಯ ನೀತಿ ಅನುಸರಿಸುತ್ತಿದೆ ಎಂದು ಕೆಎಂಎಫ್ ಅಧ್ಯಕ್ಷ ಎಸ್.ಭೀಮನಾಯ್ಕ ಅಭಿಪ್ರಾಯಪಟ್ಟರು.

ಪಟ್ಟಣದಲ್ಲಿ ತಮ್ಮ ಜನಸಂಪರ್ಕ ಕಚೇರಿಯಲ್ಲಿ ವಿವಿದ್ಧೋದೇಶ ಪ್ರಾಥಮಿಕ ಗ್ರಾಮೀಣ ಸಹಕಾರ ಸಂಘದ ನೂತನ ನಿರ್ದೇಶಕರ ಸನ್ಮಾನ ಸಮಾರಂಭದಲ್ಲಿ ಮಾತನಾಡಿದರು. ಸಹಕಾರಿ ಕ್ಷೇತ್ರದಲ್ಲಿ ತಾಲೂಕಿನಲ್ಲಿ ಹೆಚ್ಚಿನ ಪ್ರಮಾಣದ ಕಾಂಗ್ರೆಸ್ ಕಾರ್ಯಕರ್ತರು ಜಯಗಳಿಸಿರುವುದು ಪ್ರಗತಿಗೆ ಪೂರಕವಾಗಿದೆ. ಕೇವಲ ಒಂದು ವರೆ ವರ್ಷದಲ್ಲೆ ಸ್ಥಳೀಯ ಆಡಳಿತದ ವಿರುದ್ಧ ಮತಚಲಾವಣೆಯಾಗಿದೆ. ರೈತರಿಗೆ ನ್ಯಾನೋಗೊಬ್ಬರ, ಕ್ರಿಮಿನಾಶಕ, ಕೃಷಿ ಸಲಕರಣೆಗಳ ಪೂರೈಕೆಗೆ ಪೂರಕ ಕ್ರಮ ಕೈಗೊಳ್ಳಬೇಕು. ರೈತರಿಗೆ ಆರ್ಥಿಕ ಬಲ ತುಂಬುವಲ್ಲಿ ನೂತನ ನಿರ್ದೇಶಕರು ನಿಸ್ವಾರ್ಥ ಮನೋಭಾವನೆಯಿಂದ ತೊಡಗಿಸಿಕೊಳ್ಳಬೇಕಿದೆ. ಸಂಘದ ಅಭಿವೃದ್ಧಿಗೆ ನಿರ್ದೇಶಕರ ಸ್ಪಂದನೆ ಅಗತ್ಯ. ಸಹಕಾರಿ ಕ್ಷೇತ್ರದಲ್ಲಿ ಹೆಚ್ಚಿನ ಸಂಖ್ಯೆಯಲ್ಲಿ ಕಾಂಗ್ರೆಸ್ ಕಾರ್ಯಕರ್ತರ ಆಯ್ಕೆ ಕ್ಷೇತ್ರದ ಮುಂದಿನ ಚುನಾವಣೆಗಳಿಗೆ ದಿಕ್ಸೂಚಿಯಾಗಿದೆ.

ಜಿ.ಪಂ.ಮಾಜಿ ಸದಸ್ಯ ಅಕ್ಕಿ ತೋಟೇಶ್ ಮಾತನಾಡಿ, ತಂಬ್ರಹಳ್ಳಿಯಲ್ಲಿ ಬಿಡಿಸಿಸಿ ಬ್ಯಾಂಕ್‌ನ ಶಾಖೆ ಆರಂಭಿಸಬೇಕು. ಸಂಘಗಳ ಅಭಿವೃದ್ಧಿಗೆ ಮತ್ತು ರೈತರಿಗೆ ಸಾಲಸೌಲಭ್ಯ ಒದಗಿಸಲು ಪೂರಕವಾಗಿ ನಿಶ್ಚಿತ ಠೇವಣಿ ಪ್ರಮಾಣ ಹೆಚ್ಚಿಸಬೇಕು. ಇಂದಿನ ಕೆಎಂಎಫ್ ಅಧ್ಯಕ್ಷ ಭೀಮನಾಯ್ಕ ಇವರು ಶಾಸಕರಾಗಿದ್ದ ವೇಳೆ ತಾಲೂಕಿನ ಬೆಣ್ಣಿಕಲ್ಲು, ಬಾಚಿಗೊಂಡನಹಳ್ಳಿ ಮತ್ತು ತಂಬ್ರಹಳ್ಳಿ ಸೇರಿ ನಾನಾ ಗ್ರಾಮಗಳಲ್ಲಿ ಸಹಕಾರಿ ಸಂಘದ ಕಟ್ಟಡ ನಿರ್ಮಾಣಕ್ಕೆ ತಲಾ 15ಲಕ್ಷರೂ. ಒದಗಿಸಿದ್ದು, ಇದೀಗ ಕಟ್ಟಡ ಪೂರ್ಣಗೊಂಡಿವೆ ಎಂದರು. ಇದೇವೇಳೆ ನಾನಾ ಗ್ರಾಮಗಳ ಸಹಕಾರ ಸಂಘಗಳಿಂದ ವಿಜೇತರನ್ನು ಸನ್ಮಾನಿಸಲಾಯಿತು. ವಾಲ್ಮೀಕಿ ಮಹಾಸಭಾದ ತಾಲೂಕು ಅಧ್ಯಕ್ಷ ಟಿ.ವೆಂಕೋಬಪ್ಪ, ಪುರಸಭೆ ಅಧ್ಯಕ್ಷ ಎಂ.ಮರಿರಾಮಣ್ಣ, ಸದಸ್ಯರಾದ ಅಜೀಜುಲ್ಲಾ, ಪವಾಡಿ ಹನುಮಂತಪ್ಪ, ಮಾಜಿ ಅಧ್ಯಕ್ಷ ತಳವಾರ ರಾಘವೇಂದ್ರ, ತಾ.ಪಂ.ಮಾಜಿ ಸದಸ್ಯ ಟಿ.ದೇವೇಂದ್ರಪ್ಪ, ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷ ಪತ್ರೇಶ್ ಹಿರೇಮಠ, ಕೆಪಿಸಿಸಿ ವಕ್ತಾರ ಪತ್ರೇಶ್ ಹಿರೇಮಠ, ಗ್ಯಾರಂಟಿ ಸಮಿತಿ ಜಿಲ್ಲಾ ಉಪಾಧ್ಯಕ್ಷ ಗುರುಬಸವರಾಜ ಸೊನ್ನದ್, ಸಹಕಾರಿ ಸಂಘದ ನಿರ್ದೇಶಕರಾದ ಹುಡೇದ್ ಗುರುಬಸವರಾಜ, ಸುರೇಶ ಯಳಕಪ್ಪನವರ್, ಈ.ಭರತ್, ಖಾದರ್ ಸಾಹೇಬ್, ದಾದಮ್ಮನವರ ಬಸವರಾಜ ಇತರರಿದ್ದರು.

## ಸ್ಟುಡೆಂಟ್ ಕಾಲಂ

# ಸೈನಿಕನಾಗಬೇಕೆಂದರೆ......



ಸೀತಾಪುರ ಎಂಬ ಊರಿತ್ತು. ಆ ಊರಿನಲ್ಲಿ ಕಾರ್ತಿಕ ಎಂಬ ಹುಡುಗನಿದ್ದನು. ಅವನಿಗೆ ಸೈನಿಕನಾಗಲು ಆಸೆ ಇತ್ತು. ನಾನು ಸೈನಿಕ ಆದರೆ ದುಡ್ಡು ಬಹಳ ಸಿಗುತ್ತವೆ ಎಂಬ ಕನಸಿತ್ತು. ಅವನು ತನ್ನ ಸ್ನೇಹಿತರು ಹಾಗೂ ಊರಿನವರ ಎದುರಿಗೆ ಆಸೆಯಿಂದ 'ನಾನು ಸೈನಿಕನಾಗುತ್ತೇನೆ' ಎಂದು ಹೇಳಿಕೊಂಡು ತಿರುಗಾಡುತ್ತಿದ್ದನು.

ಹೀಗಿರಲು ಅವನಿಗೆ ಶಾಲೆಯಲ್ಲಿ ಪರೀಕ್ಷೆಗಳು ನಡೆದವು. ಪರೀಕ್ಷೆಗೆ ಹೇಗೆ ಓದಬೇಕು ಅಂತ ಗೊತ್ತಿರಲಿಲ್ಲ. ಪರೀಕ್ಷೆ ಇದ್ದರೂ ಸಹ ಸಂಜೆ ವೇಳೆ ಊರಿನಲ್ಲಿ ತಿರುಗಾಡುತ್ತಿದ್ದನು. ಓದದೇ ಪರೀಕ್ಷೆ ಬರೆದನು. ಹಾಗಾಗಿ ಪರೀಕ್ಷೆಯಲ್ಲಿ ಫೇಲಾದನು. ಫೇಲಾಗಿದ್ದರಿಂದ ಊರಿನಲ್ಲಿ ಬೇಜಾರಿನಿಂದ ತಿರುಗಾಡುತ್ತಿದ್ದನು. ಇದನ್ನು ನೋಡಿದ ಅವನ ಸ್ನೇಹಿತರು 'ಯಾಕೆ ಬೇಸರವಾಗಿರುವೆ?' ಎಂದು ಕೇಳಿದರು. ಆಗ ಅವನು 'ಇಲ್ಲ, ಪರೀಕ್ಷೆ ಬರೆಯುವುದು ಹೇಗೆ ಅಂತ ನನಗೆ ಗೊತ್ತಿರಲಿಲ್ಲ. ಫೇಲಾದೆ. ಅದಕ್ಕಾಗಿ ಬೇಸರವಾಗಿದೆ' ಎಂದನು. ಆಗ ಅವನ ಸ್ನೇಹಿತರು ಒಂದು ಉಪಾಯ ಹೇಳಿಕೊಟ್ಟರು.

ಆದರೆ ಅವನು ಉಪಾಯ ಹೇಳಿಕೊಟ್ಟ ಸ್ನೇಹಿತರಿಗೆ ಥ್ಯಾಂಕ್ಸ್ ಹೇಳಲಿಲ್ಲ. ಅವನ ಸ್ನೇಹಿತರು ಬೇಸರಗೊಂಡು ಹೋದರು. 'ಇವನಿಗೆ ಎಷ್ಟು ಹೇಳಿದರೂ ಇಷ್ಟೆ, ನಾವಿನ್ನು ಇವನಿಗೆ ಯಾವುದೇ ಉಪಾಯ ಹೇಳಬಾರದು' ಎಂದು ಇಬ್ಬರು ಸ್ನೇಹಿತರು ಅವನ ಬಗ್ಗೆ ಕೆಟ್ಟದಾಗಿ ಮಾತನಾಡುತ್ತಿದ್ದರು. ಅದನ್ನು ಕೇಳಿಸಿಕೊಂಡ ಕಾರ್ತಿಕನಿಗೆ 'ನಾನು ಈಗಲಾದರೂ ಚೆನ್ನಾಗಿ ಓದಲೇಬೇಕು' ಎನಿಸಿತು.



ಆಗ ಕಾರ್ತಿಕ ಚೆನ್ನಾಗಿ ಓದಲಿಕ್ಕೆ ಪ್ರಯತ್ನಿಸಿದನು. ಮೊದಲನೆ ಪರೀಕ್ಷೆಯಲ್ಲಿ ಅವನು ಶೇಕಡಾ 95ರಷ್ಟು ಅಂಕ ತೆಗೆದುಕೊಂಡನು. ಈಗ ಅವನಿಗೆ ಅಹಂಕಾರ ಹೆಚ್ಚಾಯಿತು. ಸೊಕ್ಕಿನಿಂದ ಊರಿನಲ್ಲಿ ತಿರುಗಾಡಿದನು. ಎರಡನೇ ಪರೀಕ್ಷೆ ಬಂತು. ಆ ಪರೀಕ್ಷೆಯಲ್ಲಿ ಕಡಿಮೆ ಅಂಕಗಳು ಬಂದವು. ಮತ್ತೆ ಬೇಸರಗೊಂಡನು. ಸ್ನೇಹಿತರ ಜೊತೆಗೆ ಸೇರಿ ಓದಿದಾಗ ಜಾಣನಿದ್ದನು.ಆದರೆ ಸೊಕ್ಕಿನಿಂದ ತಿರುಗಾಡಿದ್ದರಿಂದ ಪರೀಕ್ಷೆಯಲ್ಲಿ ಕಡಿಮೆ ಅಂಕ ತೆಗೆದುಕೊಂಡನು.

ಪುನಹ ಸ್ನೇಹಿತರ ಬಳಿ ಹೋದನು. ಆಗ ಅವರು ಇವನನ್ನು ಹತ್ತಿರ ಬಿಟ್ಟುಕೊಳ್ಳಲಿಲ್ಲ. 'ನಿನಗೆ ಬೇಕಾದಾಗ ಮಾತ್ರ ನಾವು ಬೇಕು ಅಲ್ವಾ. ನಿನ್ನಂತಹವನ ಸ್ನೇಹ ನಮಗೆ ಬೇಡ' ಎಂದು ಅವನ ಜೊತೆಗೆ ಮಾತು ಬಿಟ್ಟರು. ಅಲ್ಲಿಂದ ಅವನು ಒಬ್ಬಂಟಿಯಾದ. ಚೆನ್ನಾಗಿ ಓದಲು ಆಗಲಿಲ್ಲ. ಹಾಗಾಗಿ ಅವನು ಸೈನಿಕ ಆಗಲಿಲ್ಲ. ಸ್ನೇಹಿತರ ಜೊತೆಗಿದ್ದು ಚೆನ್ನಾಗಿ ಓದಿದ್ದರೆ ಖಂಡಿತ ಸೈನಿಕ ಆಗುತ್ತಿದ್ದ ಅಲ್ಲವೇ?

– ಯು, ರೋಜ. 10ನೇ ತರಗತಿ.
ಸರ್ಕಾರಿ ಪ್ರೌಢಶಾಲೆ. ಬಸರಕೋಡು ಹ.ಬೊ.ಹಳ್ಳಿ(ತಾ)

## ನಿಮ್ಮ ಮಕ್ಕಳು ಅರಸರಾಗಬೇಕೆ?

**ಕನ್ನಡ ದಿನಪತ್ರಿಕೆ, ಪುಸ್ತಕಗಳನ್ನು ಮಕ್ಕಳ ಕೈಯಲ್ಲಿಡಿ. ಹಿರಿಯರನ್ನು ಅನುಸರಿಸುವ ಮಕ್ಕಳು ಮೊಬೈಲ್ ಬಿಟ್ಟು ಅಕ್ಷರ ದಾಸರಾಗುತ್ತಾರೆ. ಅಕ್ಷರ ದಾಸರಾದರೆ ಅರಸರು ಆಗಬಲ್ಲರಲ್ಲವೇ ?**

## ನೀವೂ ಬರೆಯಬಹುದು

ಹಂಪಿ ಟೈಮ್ಸ್ ಪತ್ರಿಕೆ ಆರಂಭಿಸಿದ್ದು ನಾವಾದರೂ, ಕೈಹಿಡಿದು ನಡೆಸುವವರು ನೀವು. ನಮ್ಮ ಇಚ್ಛೆಯೂ ಒಳಗೊಂಡಂತೆ ನಿಮ್ಮ ಆಶಯಗಳಿಗೆ ತಕ್ಕಂತೆ ಪತ್ರಿಕೆಯನ್ನು ರೂಪಿಸುವ ಹೊಣೆಗಾರಿಕೆ, ಜವಾಬ್ದಾರಿಯೂ ನಮ್ಮದಾಗಿದೆ. ಇಲ್ಲಿ ಕೇವಲ ನಮ್ಮ ಬರವಣಿಗೆ ಅಷ್ಟೇ ಅಲ್ಲದೇ, ಬರಹಗಾರರಾಗಿದ್ದರೆ ನೀವೂ ಕೂಡ ನಿಮ್ಮ ಬರಹವನ್ನಿಲ್ಲಿ ಓದಬಹುದು. ಈ ನಿಟ್ಟಿನಲ್ಲಿ ನಿಮ್ಮಿಂದ ಕತೆ, ಕವನ, ವಿವಿಧ ಪ್ರಕಾರದ ಸಾಹಿತ್ಯ ಹಾಗೂ ಮಹಿಳಾ ಮತ್ತು ಮಕ್ಕಳ ಪರ ಚಿಂತನೆ ಒಳಗೊಂಡ ಲೇಖನಗಳನ್ನು ನಾವು ನಿರೀಕ್ಷಿಸುತ್ತಿದ್ದೇವೆ. ಜೊತೆಗೆ ಬಹುಮುಖ್ಯವಾಗಿ ಈ ನೆಲದ ಜನರ ಧ್ವನಿಯಾಗುವ ಹಂಬಲದಿಂದ ಸಾರ್ವಜನಿಕ ಕುಂದು ಕೊರತೆಗಳನ್ನು ಹೇಳಿಕೊಳ್ಳಬಹುದು. ಓದುಗ ಪ್ರಭುಗಳಾದ ನೀವು ಪತ್ರಿಕೆಯ ಭಾಗವೂ ಹೌದು. ಹೀಗಾಗಿ ನಿಮ್ಮ ಪ್ರತಿಕ್ರಿಯೆಯೂ ನಮಗೆ ಅತ್ಯಮೂಲ್ಯ. **ಕಥೆ, ಕವನ, ಸಾಹಿತ್ಯ, ತಂತ್ರಜ್ಞಾನ, ಆರೋಗ್ಯ, ಶಿಕ್ಷಣ, ಕ್ರೀಡೆ, ಕೃಷಿ, ಅಪರೂಪದ ವ್ಯಕ್ತಿಗಳು, ಅಂಕಣ, ಮಹಿಳೆ ಮತ್ತು ಮಕ್ಕಳು ಸೇರಿದಂತೆ ವಿವಿಧ ಕ್ಷೇತ್ರಗಳ** ಕುರಿತಾದ ನಿಮ್ಮ ಬರಹಗಳನ್ನೆಲ್ಲ ಸ್ವೀಕರಿಸುತ್ತೇವೆ ಆದರೆ, ಕಳುಹಿಸಿದ ಬರಹಗಳಲ್ಲಿ ಸಮಂಜಸ ಎನಿಸುವುದಷ್ಟೇ ಪ್ರಕಟಿಸುತ್ತೇವೆ. ನಮ್ಮ ನಂಬುಗೆಯ ಸಮಾಜಕ್ಕಾಗಿ ಒಳಿತನ್ನೇ ಬಯಸುತ್ತ, ಬರೆಯುತ್ತ ಎಲ್ಲರೂ ಒಳ ಗೊಳ್ಳೋಣ.

### ಬೆಳಕಿನ ಹಾದಿ

ರಾಮಾಯಣ, ಮಹಾಭಾರತ, ಸಾಧು ಸಂತರು, ವಿಜ್ಞಾನಿ, ಹೀಗೆ ಪುಣ್ಯ ಪುರುಷರ ಜೀವನದಲ್ಲಿ ನಡೆದ ಘಟನೆಗಳು ಅಥವಾ ನೈತಿಕ ಕಥೆಗಳನ್ನು ಬರೆದು, ಕೊನೆಗೆ ಅಂತಹ ಕಥೆಯಿಂದ ನಮಗೆ ತಿಳಿಯುವ ಮೌಲ್ಯದ ಬಗ್ಗೆ 250 ಪದಗಳ ಮಿತಿಯಲ್ಲಿ ಬೆಳಕಿನ ಹಾದಿ ವಿಭಾಗಕ್ಕೆ ಬರೆದು ಕಳುಹಿಸಿ. ಸೂಕ್ತವಿದ್ದಲ್ಲಿ ಪ್ರಕಟಿಸುತ್ತೇವೆ. ಹೊಸ ಬರಹಗಾರರಿಗೆ ಅವಕಾಶ ಸಿದ್ಧವಾಗಿದೆ.

–: ಸಂಪಾದಕರು :–

**ಹಂಪಿ ಟೈಮ್ಸ್, ಶ್ರೀ ಓಂಕಾರೇಶ್ವರ ದೇವಸ್ಥಾನದ ಪಕ್ಕದಲ್ಲಿ, ವಾಲ್ಮೀಕಿ ವೃತ್ತದ ಹತ್ತಿರ, ಹೊಸಪೇಟೆ, ವಿಜಯನಗರ ಜಿಲ್ಲೆ.**
ಇ–ಮೇಲ್:hampitimes@gmail.com
M: 94486 33038

## ಓದುಗರ ಗಮನಕ್ಕೆ

ಪತ್ರಿಕೆಯಲ್ಲಿ ಪ್ರಕಟವಾಗುವ ಜಾಹೀರಾತುಗಳು ವಿಶ್ವಾಸಪೂರ್ಣವೇ ಆದರೂ ಅವುಗಳಲ್ಲಿನ ಮಾಹಿತಿ, ವಸ್ತುಲೋಪ, ದೋಷ, ಗುಣಮಟ್ಟ ಮುಂತಾದವುಗಳ ಕುರಿತು ಆಸಕ್ತ ಸಾರ್ವಜನಿಕರು ಜಾಹೀರಾತುದಾರ ರೊಡನೆಯೇ ವ್ಯವಹರಿಸಬೇಕಾಗುತ್ತದೆ. ಅದಕ್ಕೆ ಪತ್ರಿಕೆ ಜವಾಬ್ದಾರಿಯಾಗುವುದಿಲ್ಲ.

– ಜಾಹೀರಾತು ವ್ಯವಸ್ಥಾಪಕರು.

# ಹಾಜರಾತಿಯಲ್ಲಿ ಚುಕ್ಕೆ ಇತ್ತು... ಒಂದು ಪ್ರಸಂಗ

"ಸರ್, ನಾನು ಮಾದಪ್ಪ ಜವಾಹರ್ ನಗರದ ಶಿಕ್ಷಕ"

ಕೈ ಮುಗಿದು ನಿಂತಿದ್ದ ಮೇಷ್ಟನ್ನು, ಕಚೇರಿಯ ಚೇರ್ ನಲ್ಲಿ ಕುಳಿತ ಸಾಹೇಬರು ತಮ್ಮ ಚಾಳೀಸಿನೊಳಗಿಂದ ಇಣುಕಿ ನೋಡಿದರು..

"ಸರ್, ಇವತ್ತು ಸ್ವಲ್ಪ ಲೇಟಾಯ್ತು.. ಮನೆಯವರಿಗೆ ಹುಷಾರಿರಲಿಲ್ಲ.. ಬಸ್ ತಪ್ಪಿತು.. ಅರ್ಧಗಂಟೆ ತಡವಾಗಿ ಬಂದೆ.. ಮೂರು ಕಿಲೋಮೀಟರ್ ನಡೆದುಕೊಂಡು ಶಾಲೆಗೆ ಹೋದೆ, ತಾವು ಬಂದಾಗ ನಾನಿರಲಿಲ್ಲ. ಕ್ಷಮಿಸಿ ಸಾರ್.. ಹಾಜರಾತಿಯಲ್ಲಿ ಚುಕ್ಕೆ ಇತ್ತು.. ತಮ್ಮ ಪರ್ಮಿಷನ್ ತಗಂಡು ಬಾ ಅಂತ ಹೆಡ್ಮಾಸ್ಟರ್ ಹೇಳಿ ಕಳಿಸಿದರು" ಶಿಕ್ಷಕ ಮಾದಪ್ಪ ಕೈ ಮುಗಿದು ಅಂಗಲಾಚಿದ..

"ದಿನಾ ನೀನು ಹೀಂಗೇನಾ" ಸಾಹೇಬರು ಸ್ವಲ್ಪ ಗರಂ ಆದರು..

"ಇಲ್ಲ ಸಾರ್, ಇವತ್ತೊಂದೇ ಹೀಗಾಗಿದ್ದು.. ತಾವು ನಮ್ಮ ಹೆಡ್ಮಾಸ್ಟರ್ ಗೆ ಕೇಳಬಹುದು"

"ಆ ಕೆಲಸ ಬೇರೆ ಮಾಡ್ಲಾ" ಮತ್ತೆ ಗರಂ ಆದರು ಸಾಹೇಬರು..

ಮಾದಪ್ಪ ಹಾಗೇ ನಿಂತಿದ್ದ...

ಅಷ್ಟರಲ್ಲಿ ಅಶ್ವತ್ಥನಾರಾಯಣ ಒಳಗೆ ಬಂದ..ಅಶ್ವತ್ಥನಾರಾಯಣ ಶಿಕ್ಷಕರ ಲೀಡರ್..

ಅತನನ್ನು ನೋಡಿದ ಅಧಿಕಾರಿ

"ಬನ್ನಿ ನಾರಾಯಣ್ ಅವರೇ ಕೂತ್ಕೊಳ್ಳಿ" ಕುರ್ಚಿ ತೋರಿಸಿದರು..

ಕುರ್ಚಿಯಲ್ಲಿ ಕುಳಿತ ಅಶ್ವತ್ಥನಾರಾಯಣ ಮಾದಪ್ಪನ ಕಡೆ ನೋಡಿದ..

"ನಿಮ್ಮನ್ನ ಎಲ್ಲೋ ನೋಡಿದಂಗಿದೆ" ಅಂದ



ಮಹಿಮ
ವಿಶ್ರಾಂತ ಉಪನಿರ್ದೇಶಕರು, ರಾಯಚೂರು

Scan For Digital Colourful
HAMPI TIMES E-paper

"ನಾನು ಮಾದಪ್ಪ ಸಾರ್, ಜವಾಹರ್ ನಗರ ಶಾಲಾ ಶಿಕ್ಷಕ"ಮಾದಪ್ಪ ಉತ್ತರಿಸಿದ..

"ಹೋ ಹೌದಾ, ಏನು ಕೆಲಸ ಇತ್ತು ಸಾಹೇಬರ ಹತ್ರ, ಅಷ್ಟೊತ್ತು ಕೈ ಮುಗಿದು ಕೊಂಡೇ ನಿಂತಿದ್ದೀರಿ, ಏನ್ ಮಾಡಿದ್ದ ಸಾರ್ ಈತ" ಶಿಕ್ಷಣಾಧಿಕಾರಿಯನ್ನು ಅಶ್ವತ್ಥ ನಾರಾಯಣ ಕೇಳಿದ..

"ಗೊತ್ತಲ್ಲ, ಹಳ್ಳಿ ಕಡೆ ಹೋದ್ರೆ ಬರೀ ಇಂಥವೇ ಕೇಸ್ ಗಳು, ಇವ್ರೆಲ್ಲಾ ಸರಿಯಾಗಿ ಶಾಲೆಗೆ ಹೋಗಲ್ಲ ಕಣ್ರೀ, ಅಪರೂಪಕ್ಕೆ ಹಳ್ಳಿ ಕಡೆಗೆ ಹೋದಾಗ ಗಿರಾಕಿ ಸಿಕ್ ಹಾಕ್ಕೊಂಡ" ಅಧಿಕಾರಿ ಮಾದಪ್ಪ ನ ಕಡೆ ದುರುಗುಟ್ಟಿ ನೋಡ್ತಾ ಹೇಳಿದ..

"ಸರ್, ಇವತ್ತೊಂದೇ ದಿನ ಲೇಟಾಗಿದ್ದು ಹತ್ತು ವರ್ಷಗಳ ನನ್ನ ಸರ್ವೀಸಿನಲ್ಲಿ..ಸಾರ್, ನಾನು ನಿಯತ್ತಾಗಿ ಕೆಲಸ ಮಾಡೋ ಟೀಚರ್ ಸಾರ್..ದಯಮಾಡಿ ಕ್ಷಮಾ ಮಾಡ್ರಿ ಇಲ್ಲಾಂದ್ರ ನಮ್ ಸ್ಟಾಫ್ ನಾಗ ಯಾರನ್ನಾದರೂ ಕೇಳ್ರಿ.." ಮಾದಪ್ಪ ವಿವರ ನೀಡಿದ..

ಅಸ್ವಸ್ಥನಾರಾಯಣನ ಪಿತ್ತ ನೆತ್ತಿಗೇರಿತು

"ನೀನು ಯಾರ ಎದುರು ನಿಂತು ಹೇಳಾಕತ್ತೀದಿ.. ಖಬರ ಐತೋ ಇಲ್ಲೋ ನಿನಗ.. ಸಾಹೇಬರು ದೇವರಂಥಾ ಮನುಷ್ಯರು, ನಿಮ್ಮಗಳ ಹಣೇಬರಹ ಈಟಾ, ಸಿಕ್ ಹಾಕ್ಕೋಳ್ಳೋದು ಇಲ್ಲಿಗೆ ಬಂದು ಕೈ ಮುಗಿಯೋದು.. ಎಲ್ಲಾ ಕಳ್ಳಾಟ" ಗುಡುಗಿದ ಅಶ್ವತ್ಥನಾರಾಯಣ..

"ನಾ ಏನೂ ಅಂದಿಲ್ರೀ ನಾರಾಯಣ ಸಾಹೇಬ್ರಾ, ನಂದು ತಪ್ಪು ಆಗೈತಿ ಸಹಿ ಮಾಡಾಕ ಪರ್ಮಿಷನ್ ಕೊಡ್ರೀ ಅಂತ ಸಾಹೇಬರಿಗೆ ಬೇಡಿಕೊಂಡೆ. ನಾನು ಶಾಲೆಗೆ ರೆಗ್ಯುಲರ್ ಅದೀನ್ರೀ, ಬೇಕಾದ್ರ ಸಾಲಿಗರ ಈಗಲೇ ಫೋನ ಹಚ್ಚರಿ" ಮಾದಪ್ಪ ಅಶ್ವತ್ಥನಾರಾಯಣನಿಗೆ ವಿವರಿಸಿದ...



"ಏಯ್, ಗೊತ್ತೇಳ, ನಿಮ್ಮನ್ನ ಇವತ್ತ ನೋಡೇನೇನು, ಇದೇ ನಿಮ್ ಹಣೇಬರಹ, ಸಾಲಿಗೆ ಹೋಗಂಗಿಲ್ಲ ಬಿಡಂಗಿಲ್ಲ" ಅಶ್ವತ್ಥ ನಾರಾಯಣ ಗರಂ ಆದ..

"ನಾರಾಯಣ್ ಅವರೇ, ನಾನು ಸಾಹೇಬರ ಬಳಿ ಬಂದು ಬೇಡಾಕತ್ತೀನಿ. ನಿಮಗಲ್ಲ. ನೀವು ಸುಮ್ಮನೆ ಇದ್ದರೆ ನಿಮಗಾ ಒಳ್ಳೆಯದು. ನಿಮಗ್ಯಾಕ ನನ್ನ ಉಸಾಬರಿ" ಗರಂ ಆದ ಮಾದಪ್ಪ..

ಅಶ್ವತ್ಥ ನ ಪಿತ್ತ ನೆತ್ತಿಗೇರಿತು..

"ನೋಡ್ರೀ ಸಾಹೇಬರಾ, ನಾನು ಸಂಘ ಸಂಸ್ಥೆ ಅಂತ ಇವರಿಗೋಸ್ಕರ ಹಗಲು ರಾತ್ರಿ ನಿದ್ದೆ ನೀರಡಿಕೆ ಇಲ್ಲದಂಗ ತಿರುಗಿದ್ರ, ಈಗ ನೋಡ್ರಿ ಮೆಟ್ಟಲೆ ಹೊಡದಂಗ ಮಾತಾಡ್ತಾನ ಇವ" ಅಶ್ವತ್ಥ ಗರಂ ದನಿಯಲ್ಲಿ ಮಾತಾಡಿದ..

"ಗೆಟ್ ಔಟ್" ಸಾಹೇಬ ಕಿರುಚಿಕೊಂಡ..

"ಯಾಕ್ರೀ ಸಾಹೇಬ್ರಾ ಏನಾತು..ಇದು ನಮ್ಮ ಆಫೀಸರೀ ಸಾಹೇಬ್ರಾ .. ಗೆಟ್ ಔಟ್ ಅನ್ನಾಕ ನಾ ಏನು ತಪ್ಪು ಮಾಡೇನಿ ಹೇಳ್ರೀ.. ಶಾಲೆ ಮುಖವನ್ನೇ ನೋಡದ ಇವ ನನಗ ಬುದ್ಧಿ ಹೇಳಾಕ ಬರ್ತಾನಾ.. ಇವನ ಹಕೀಕತ್ತು ಇಡೀ ಜಿಲ್ಲಕ್ಕ ಗೊತ್ತದ. ಒಂದು ದಿನ ಶಾಲೆಗೆ ಹೋಗದ ಇವನಿಗೆ, ಎಂದೂ ಪಾಠ ಮಾಡದ ಇವನಿಗೆ ಕರದು ಕುರ್ಚಿ ಮ್ಯಾಲ ಕುಂದರಿಸಿ ಗೌರವ ಕೊಟ್ಟು ಮಾತಾಡ್ತೀರಿ. ಇದು ಯಾವ ನ್ಯಾಯ ರೀ ಸಾರ್" ಮಾದಪ್ಪ ಫುಲ್ ಗರಂ ಆದ..

"ಇವರು ಸಂಘದ ಪದಾಧಿಕಾರಿಗಳು, ಮೈ ಮೇಲೆ ಖಬರು ಐತೋ ಇಲ್ಲೋ ನಿನಗ"ಸಾಹೇಬ ಗದರಿದ..

" ಆತ್ರಿ ಸಾಹೇಬರಾ, ಅವ ಯಾರಂತ ಇಡೀ ಜಿಲ್ಲಕ್ಕ ಗೊತ್ತದ.. ಇವ ಸಾಲಿ ಮುಖ ನೋಡಿದಾವ ಅಲ್ಲ, ಪಾಠ ಮಾಡಿದಾವ ಅಲ್ಲ, ಶಾಲೆಗೆ ಹೋಗಿ ನಿಯತ್ತಾಗಿ ಪಾಠ ಮಾಡೋ ಮೇಷ್ಟು ಗಳು ನಿಂ ಕಣ್ಣಿಗೆ ಬೀಳಂಗಿಲ್ರೀ, ನಮ್ಮನ್ನ ಗದರ್ತೀರಿ.. ಇವನೆಂದಾದರ ಪಾಠ ಟಿಪ್ಪಣಿ ಬರದಾನಾ, ಸಾಲಿಗೆ ಹೋಗ್ಯಾನಾ, ಪಾಠ ಮಾಡ್ಯಾನಾ? ಬರ್ರೀ ಸಾಹೇಬರಾ ಈತ ಕೆಲಸ ಮಾಡಾ ನರಸೀಪುರಕ್ಕ ಹೋಗಿ ಜನಾನ ಕೇಳಾನಾ.. ಇವ ಯಾರರೀ ನನಗ ಹೇಳಾಕ...."ಮಾದಪ್ಪ ಮುಖಕ್ಕೆ ಹೊಡೆದವನಂತೆ ಹೇಳಿಬಿಟ್ಟ.

ಅಶ್ವತ್ಥ ನಾರಾಯಣ ನಿಗೆ ಮುಖಭಂಗ ಆದಂತಾಗಿ ಕಚೇರಿಯಿಂದ ಬಿರಬಿರನೇ ಹೊರ ನಡೆದ...

"ನಿನ್ನ ಸಸ್ಪೆಂಡ್ ಮಾಡ್ತೀನಿ" ಅಧಿಕಾರಿ ಗುಡುಗಿದ

"ಸಾಹೇಬರೇ, ನಿಮ್ಮ ಆತ್ಮಸಾಕ್ಷಿ ಒಪ್ಪಿದ್ರ ಮಾಡ್ರೀ ಸಸ್ಪೆಂಡ್.. ಒಂದು ಜ್ಞಾಪಕ ಇಡ್ರೀ ಸಾಹೇಬರಾ.. ನಮ್ಮಂಥಾ ಪಾಠ ಮಾಡೋ ಮೇಷ್ಟು ಗಳಿಂದ ಇಲಾಖೆ ಮಾನ ಮರ್ಯಾದಿ, ನಿಮಗ ಮಾನ ಮರ್ಯಾದಿ ಉಳಿದೈತಿ.. ಇಂತಹ ಅಡ್ಡ ಕಸುಬಿಗಳಿಂದಲ್ಲ.. ಇದನ್ನ ನೆನಪಿಡ್ರೀ.. ಸಸ್ಪೆಂಡ್ ಮಾಡ್ತೀರಾ ಮಾಡ್ರೀ ಸಾಹೇಬರಾ, ಎಂದಾದರೂ ಪಾಠ ಮಾಡುವ ಶಿಕ್ಷಕರಿಗೆ ಪ್ರಶಸ್ತಿ ಕೊಟ್ಟೀರೇನು, ಅವರ ಬೆನ್ನು ತಟ್ಟಿದ್ದೀರೇನು.. ಮುಖ ನೋಡಿ ಮಣೆ ಹಾಕಬ್ಯಾಡ್ರೀ ಸಾಹೇಬ್ರಾ, ಕಾಯಕ ನಿಯತ್ತಾಗಿ ಮಾಡೋರಿಗೆ ಮಣೆ ಹಾಕಿ, ಆಗ ನಿಮಗ ನಿಮ್ಮ ಕುರ್ಚಿಗೆ ಗೌರವ ಬರ್ತದ ಸಾಹೇಬ್ರಾ." ಮಾದಪ್ಪ ಖಾರವಾಗಿ ನುಡಿದ.

ಸಾಹೇಬ ಗಾಬರಿಯಾದ..

"ನೀವು ಹೋಗಿ ಸಹಿ ಮಾಡಬಹುದು" ಎಂದಷ್ಟೇ ಹೇಳಿ ಜೀಪ್ ಹತ್ತಿದ ಸಾಹೇಬ..

ಅಷ್ಟೊತ್ತು ಹೊರಗೆ ನಿಂತಿದ್ದ ಅಸ್ವಸ್ಥನಾರಾಯಣ ಎಂಬ ಡ್ರಾಪ್ ಔಟ್ ಶಿಕ್ಷಕ ಸಾಹೇಬರ ಜೊತೆ ಜೀಪ್ ಹತ್ತಿ ಕುಳಿತ.. ಜೀಪ್ ಎತ್ತ ಕಡೆಗೋ ಹೊರಟಿತು...

(ಗಮನಿಸಿ...ಶಾಲೆಗೆ ನಿರಂತರವಾಗಿ ತೆರಳಿ ಪಾಠಪ್ರವಚನದಲ್ಲಿ ತೊಡಗುವ ಅಪರೂಪದ ಪದಾಧಿಕಾರಿಗಳು ಸಹ ಇದ್ದಾರೆ...)

# ನಾವು ಕರೆಯುವ ಮುನ್ನವೇ ನಮ್ಮ ಕಷ್ಟಕ್ಕೆ ಹೆಗಲಾಗುವ ಸ್ನೇಹಿತರ ಅಯ್ಕೆ.......

ಆ ಪುಟ್ಟ ಯುವತಿ ತನ್ನ ತಾಯಿಯೊಂದಿಗೆ ನಾವು ನಿಜವಾಗಿಯೂ ಜೀವನದಲ್ಲಿ ಸ್ನೇಹಿತರನ್ನು ಹೊಂದಿರಬೇಕೇ? ಎಂದು ಕೇಳಿದಳು.

ಅದಕ್ಕೆ ಉತ್ತರವಾಗಿ ಆಕೆಯ ತಾಯಿ ಖಂಡಿತವಾಗಿಯೂ ಬೇಕು. ಜೀವನ ನಾವು ತಿಳಿದುಕೊಂಡಿದ್ದಕ್ಕಿಂತ ಹೆಚ್ಚು ಕಠಿಣವಾಗಿದೆ. ನಮ್ಮ ನೋವಿಗೆ ಸಾಂತ್ವನದ ಮುಲಾಮು ಸವರುವ,ನಮ್ಮ ಆರ್ತನಾದಕ್ಕೆ ಕಿವಿಯಾಗುವ, ನಮ್ಮ ಕಷ್ಟಗಳಿಗೆ ಹೆಗಲು ಕೊಡುವ ಸ್ನೇಹಿತರು ಖಂಡಿತವಾಗಿಯೂ ಜೀವನದಲ್ಲಿ ನಮ್ಮೊಂದಿಗೆ ಇರಬೇಕು. ಅವರು ನಮ್ಮೊಂದಿಗೆ ಅತ್ಯಂತ ಸರಳವಾಗಿ ವರ್ತಿಸಬೇಕು. ಯಾವುದೇ ರೀತಿಯಲ್ಲಿಯೂ ನಮ್ಮನ್ನು ಜಡ್ಜ್ ಮಾಡದೆ ನಮ್ಮ ಕಷ್ಟ ಸುಖಗಳಲ್ಲಿ ಜೊತೆಗಿರಬೇಕು.

ಎಂದು ತಾಯಿ ಉತ್ತರಿಸಿದಳು. ಮಗಳು "ಹಾಗಾದರೆ ಬದುಕಿನಲ್ಲಿ ಸ್ನೇಹದ ನಟನೆ ಮಾಡುವವರು ವೈರಿಗಿಂತ ಹೆಚ್ಚು ಅಪಾಯಕಾರಿ ಎಂದು ನೀನು ಹೇಳುವುದು ಏಕೆ? " ಎಂದು ಕೇಳಿದಳು.

ಮುಖದಲ್ಲಿ ನಸುನಗು ಮೂಡಿಸಿದ ತಾಯಿ "ನಿನ್ನ ಶತ್ರುಗಳನ್ನು ನೀನೆಂದೂ ಹತ್ತಿರಕ್ಕೆ ಬಿಟ್ಟುಕೊಳ್ಳುವುದಿಲ್ಲ, ಅವರಿಗೆ ನಿನ್ನ ಕುರಿತ ರಹಸ್ಯಗಳು ಗೊತ್ತಾಗುವುದಿಲ್ಲ. ನೀನು ಹೀಗೆಯೇ ಎಂದು ಅವರು ನಿನ್ನನ್ನು ಅರ್ಥೈಸಿಕೊಳ್ಳಲು ಸಾಧ್ಯವಾಗುವುದಿಲ್ಲ... ಆದರೆ ಸ್ನೇಹದ ನಟನೆ ಮಾಡುವವರು ನಿನ್ನ ಜೊತೆಗಿದ್ದು ಕೂಡ ನಿನ್ನ ನಂಬಿಕೆಯನ್ನು ಮುರಿಯಬಲ್ಲರು. ನಿನ್ನೆಲ್ಲಾ ರಹಸ್ಯಗಳ ಅರಿವು ಅವರಿಗಿರುತ್ತದೆ. ನಿನ್ನ ಕನಸುಗಳು ಕೂಡ ಅವರಿಗೆ ಗೊತ್ತು. ಮನಸ್ಸು ಮಾಡಿದರೆ ನಿನ್ನಂತರಂಗದ ಯಾವ ಭಾವವನ್ನು ಕಲಕಬಲ್ಲೆ, ಮನಸ್ಸಿಗೆ ಘಾಸಿ ಮಾಡಬಲ್ಲೆ ಎಂಬ ಅರಿವಿರುವ ಕಪಟಿ ಸ್ನೇಹಿತರು ನಿನ್ನ ಬೆನ್ನಿಗೆ ಯಾವತ್ತೋ ಒಂದು ದಿನ ಚೂರಿ ಹಾಕಬಲ್ಲರು" ಎಂದು ಉತ್ತರಿಸಿದಳು. ಹಾಗಾದರೆ ನನ್ನ ಸುತ್ತ ಇರುವ ಕಪಟಿ ಸ್ನೇಹಿತರನ್ನು ನಾನು ಹೇಗೆ ದೂರೀಕರಿಸಬಹುದು ಎಂದು ಮಗಳು ಕೇಳಿದಾಗ ತಾಯಿ ಒಂದೆರಡು ನಿಮಿಷಗಳ ಮೌನದ ನಂತರ ದೀರ್ಘವಾದ ನಿಟ್ಟುಸಿರನ್ನು ಬಿಟ್ಟು ನಂತರ




ವೀಣಾ ಹೇಮಂತಗೌಡ ಪಾಟೀಲ್
ಲೇಖಕರು, ಮುಂಡರಗಿ, ಗದಗ

Scan For Digital Colourful
HAMPI TIMES E-paper

"ಒಂದು ಪುಟ್ಟ ಉದ್ಯಾನವನವನ್ನು ನೀನು ನಿರ್ವಹಿಸುವಾಗ ನಿನಗೆ ಅಲ್ಲಿ ಅತ್ಯಂತ ಕಡಿಮೆ ಪ್ರಮಾಣದಲ್ಲಿ ಹಾವು, ಚೇಳು, ಇಲಿಗಳ ಕಾಟ ಅನುಭವವಾಗುತ್ತದೆ. ಪುಟ್ಟ ಉದ್ಯಾನದ ಕಸವನ್ನು ನಿರ್ವಹಿಸುವುದು,ಗಿಡ ಮರಗಳನ್ನು ಸುಂದರವಾಗಿ, ಕ್ರಮಬದ್ಧವಾಗಿ ಕತ್ತರಿಸು ವುದು, ಔಷಧಿ ಗೊಬ್ಬರ ಕೊಡುವುದು ಹೂಗ ಳನ್ನು ಹಣ್ಣುಗಳನ್ನು ನಾಜೂಕಾಗಿ ಕಿತ್ತು ಬಳಸುವುದು ಸರಳ ಮತ್ತು ಸುಲಭವಾಗಿ ರುತ್ತದೆ.

ಅಂತೆಯೇ ನಿನ್ನ ಸ್ನೇಹಿತರ ಬಳಗವನ್ನು ಚಿಕ್ಕದಾಗಿ ಇಟ್ಟು



ಕೊಂಡರೆ ನೀನು ಅತ್ಯಂತ ಕಡಿಮೆ ತೊಂದರೆಗಳನ್ನು ಅನುಭವಿಸುವೆ. ನಿಜವಾದ ಸ್ನೇಹಿತರೊಂದಿಗಿನ ಬಾಂಧವ್ಯ ನಿನ್ನನ್ನು ಸದಾ ಸಂತೋಷ, ನೆಮ್ಮದಿಗೆ ಈಡು ಮಾಡಿದರೆ ಕಪಟಿ ಸ್ನೇಹಿತರು ನಿಮ್ಮ ಒಳ್ಳೆಯತನದ ಲಾಭವನ್ನು ಪಡೆಯಬಹುದು. ನೀವು ಬಳಸಲ್ಪಟ್ಟ ಭಾವವನ್ನು ಹೊಂದಲು ಕಾರಣರಾಗಬಹುದು.

ನಾನು ಕೂಡ ಒಂದೊಮ್ಮೆ ಅತಿಹೆಚ್ಚಿನ ಸ್ನೇಹ ಬಳಗವನ್ನು ಹೊಂದಿದ್ದೆ.. ಸ್ನೇಹಿತರ ಸಂಖ್ಯೆ ಕಡಿಮೆ ಇದ್ದಷ್ಟು ಉತ್ತಮ ಎಂಬುದು ಅರಿವಾಗಿ ನಿಧಾನವಾಗಿ ಆ ಎಲ್ಲ ಬಂಧಗಳು ಕಳಚಿ ಕೊಂಡು ಇದೀಗ ಕೆಲವೇ ಸ್ನೇಹಿತರ ಸಂಗದಲ್ಲಿ ಆತ್ಮೀಯತೆ, ನೆಮ್ಮದಿ, ತೃಪ್ತಿ ಎಲ್ಲವನ್ನು ಕಂಡುಕೊಂಡಿದ್ದೇನೆ.

ನಾವು ಹೇಳದೆಯೇ ನಮ್ಮ ನೋವನ್ನು ಅರ್ಥ ಮಾಡಿಕೊಳ್ಳುವ, ನಾವು ಕರೆಯುವ ಮುನ್ನವೇ ನಮ್ಮ ಕಷ್ಟಕ್ಕೆ ಹೆಗಲಾಗುವ, ನಮ್ಮ ಮೌನದೊಳಗಿನ ಮಾತನ್ನು ಕೂಡ ಅರಿಯುವ, ನಮ್ಮ ಮುಖಕ್ಕೆ ಹೊಡೆದಂತೆಯೇ ನಮ್ಮ ತಪ್ಪುಗಳನ್ನು ಹೇಳಿ ನಮ್ಮನ್ನು ತಿದ್ದಲು ಬಯಸುವ ಕೆಲವೇ ಕೆಲವು ಸ್ನೇಹಿತರು ಬದುಕನ್ನು ಅತ್ಯಂತ ಸುಂದರವಾಗಿ ಸುವರು. ಸ್ನೇಹಿತರ ಕ್ವಾಂಟಿಟಿಗಿಂತ, ಕ್ವಾಲಿಟಿ ಹೆಚ್ಚಿರ ಬೇಕು ಎಂಬ ಬದುಕಿನ ಸತ್ಯವನ್ನು ಅರಿತ ನನಗೆ ಕಪಟ ಸ್ನೇಹಿತರ ಜಾಲದಿಂದ ಹೊರಬೀಳಲು ಸಾಧ್ಯವಾಗಿದ್ದು ಇದೀಗ ಧ್ಯಾನ ಪೂರ್ವಕವಾಗಿ ನಾನು ಸ್ನೇಹಿತರನ್ನು ಆಯ್ದುಕೊಂಡಿದ್ದೇನೆ ಎಂದು ದೀರ್ಘವಾಗಿ ವಿವರಣೆ ಕೊಟ್ಟಳು.

ಒಳ್ಳೆಯ ಸ್ನೇಹಿತರು ನಮಗೆ ಬದುಕನ್ನು ಹೇಗೆ ನಡೆಸಬೇಕು ಎಂಬುದಕ್ಕೆ ಉದಾಹರಣೆಯಾಗಿ ನಿಂತರೆ, ಕಪಟಿಗಳಿಂದ ಹೇಗೆ ದೂರವಿರಬೇಕು ಎಂಬ ಅರಿವು ಖಂಡಿತವಾಗಿಯೂ ನಮ್ಮ ಬದುಕಿ ನಲ್ಲಿ ಪ್ರಮುಖ ಪಾತ್ರವನ್ನು ವಹಿಸುತ್ತದೆ. ಆದ್ದರಿಂದ ಸ್ನೇಹಿತರನ್ನು ಆಯ್ಕೆ ಮಾಡಿಕೊಳ್ಳುವಾಗ ಎಚ್ಚರವಿರಲಿ.....

ಚೂಸ್ ವೈಸ್ ಲಿ

Printed by: MANJUNATHA .H .B Published by: A. SHUBHA. Owned by: A. SHUBHA and Printed at : AMRITH PRINTERS, No. 63/A, Opp. Police Station, Ramanagara, Hagaribommanahalli – 583212, Vijayanagara Dist., Karnataka. Published at : At Ward No.15, Near Bannimahankali Temple, 3rd Cross, New Amaravathi, Hospet - 583201, Vijayanagara Dist., Karnataka. Editor : BASAPUR BASAVARAJA, PRGI No:KARKAN/2023/88055

## ಕವಿ ಮನಸು

### ಏನೆನ್ನಬೇಕು

ಕಡಿದಾದ ಕಣಿವೆಯಲಿ
ಎಡವಿ ಬಿದ್ದವನ ನೋಡಿ
ಸ್ವಂತಿಯನೋ ಛಾಯಾಗ್ರಹಣವನೋ
ಮಾಡುವ ನಾವು.....
ದವಾಖಾನೆಗೆ ಸೇರಿಸುವ ಔದಾರ್ಯ
ತೋರುವ ಮನುಜರಾಗದೆ
ನಿರ್ಭಾವುಕರಾಗುತಿಹುದನು ಏನೆನ್ನಬೇಕು?

ಕಣ್ಣಿಗೆ ಎಣ್ಣೆಯ ಬಿಟ್ಟುಕೊಂಡು
ಕಲ್ಪನೆಗೂ ಮೀರಿದ ಸಾಧನೆಗೈದವರ
ಕರೆದು ಕನಿಕರಿಸಬೇಕಿದ್ದ
ನಾವು....ಅದರೊಳಗೂ ಜಾತಿಯ ಹುಡುಕುವ
ತಿಳಗೇಡಿತನಕ್ಕೆ
ಏನನ್ನಬೇಕು?

ನಮದೇ ಹಣವ ಲೂಟಿ ಮಾಡಿ
ದುಡ್ಡು ಮಾಡಿದ ದಡ್ಡರ ಕಂಡು ಸೆಡ್ಡು
ಹೊಡೆದು ದೂರವಿಡಬೇಕಿದ್ದ ನಾವು....
ದೊಡ್ಡಹಾರಗಳ ಹಾಕುವುದಕ್ಕೆ ಏನನ್ನಬೇಕು?

ಗುರುಗಳು ಬೈದರೆಂದೋ
ಸಣ್ಣ ಪೆಟ್ಟು ಕೊಟ್ಟರೆಂದೋ
ಅವರ ವಿರುದ್ಧವೇ ಧರಣಿ ಕೂರುವ
ನಾವೂ.....
ಬೆಳೆದದ್ದು ಅದೇ ಗುರುಗಳ
ಮಾರ್ಗದರ್ಶನದಿ ಎಂಬುದ
ಮರೆಯುತ್ತಿರುವುದಕ್ಕೆ
ಏನೆನ್ನಬೇಕು?

ಲೆಕ್ಕವಿಲ್ಲದಷ್ಟು ಮೋಸ ಮಾಡಿ
ಬೊಕ್ಕಸವ ತುಂಬಿಸುವವನ
ಅಕ್ಕ ಪಕ್ಕ ಕೂಡಿಸಿಕೊಂಡು ಸಿಕ್ಕಾಪಟ್ಟೆ,
ಸನ್ಮಾನಿಸಿ ಉದ್ಯಮಿಯ ಪಟ್ಟ ಕಟ್ಟುವ
ನಮ್ಮನು ನಾವು
ಏನೆಂದುಕೊಳ್ಳಬೇಕು?

– ಶೇಖರಯ್ಯ ಟಿಹೆಚ್‌ಎಂ
ಗೆದ್ದಲಗಟ್ಟೆ, ಕೂಡ್ಲಿಗಿ ತಾಲೂಕು

### ನೆನಪಿನ ದೋಣಿ

ನೆನಪಿನ ದೋಣಿಯ ಮೇಲೇರಿ
ಸಾಗುತಿಹುದು ಈ ಬಾಳ ಪಯಣ
ಘಟಿಸಿದ ಕನಸಿನಂತಿನ ಬಾಳನು
ಮೆಲುಕು ಹಾಕುತ್ತಾ ಸಾಗಲಿ ಮುಂದೆ

ಕಹಿ ದಿನಗಳಿಗೆ ನೋವಿನಲಿ ಕುಗ್ಗದೆ
ದುಃಖದ ವಿಷಘಳಿಗೆಗೆ ವಿಚಲಿತವಾಗದೆ
ಖುಷಿ ದಿನಗಳನ್ನು ಸಂತೋಷದಿ ನೆನೆಯುತ್ತಾ
ಕುಣಿದು ನಲಿದು ಸಾಗಲಿ ನೆನಪಿನ ದೋಣಿ

ಬಾಳಲಿ ಸುಖ ದುಃಖಗಳು ಸಹಜವೆಂದರಿತು
ಘೋರ ಬಿರುಗಾಳಿ ಸುಂಟರಗಾಳಿಗೆ ಅಂಜದೆ
ಉಬ್ಬರವಿಳಿತದ ಅಲೆಗಳಂತೆ ಏರುಪೇರಾಗದೆ
ಬಂಡೆಕಲ್ಲು ಎದುರಾದರೂ ತಟಸ್ಥವಾಗಿ
ಸಾಗಲಿ

ನೆನಪಿನ ದೋಣಿಯ ನಾವಿಕರು ನಾವೆಲ್ಲರೂ
ಹಿಂದಿನ ಬಾಳ ನೆನಪುಗಳಿಂದ ಪಾಠ ಕಲಿತು
ಗೆಲುವಿನಲ್ಲಿ ಬಾಳಯಾನದ ತೀರವ
ಸೇರೋಣ
ಬಾಳದೋಣಿ ಖುಷಿಯಲಿ
ಸಾಗುತಿರಲೆನ್ನೋಣ.

– ಪ್ರಜ್ಞಾ ರವೀಶ್ ಕುಳಮರ್ವ,
ಕಾಸರಗೋಡು

### ಹೊಸ ವರ್ಷ ಬಂತು–2025

ಹೊಸ ವರ್ಷ ಬಂತು
ಎಲ್ಲರಲಿ ಹರ್ಷ ತಂತು
ಮನಸು ಜಾಗ್ರತೆಯಾಯ್ತು
ಹುಮ್ಮಸ್ಸು ಮೂರ್ಮಡಿಯಾಯ್ತು।

ಹೊಸ ವರ್ಷದ ಅವಧಿ
ಬಾರದಿರಲಿ ತಗಾದಿ
ಪ್ರೀತಿ ವಿಶ್ವಾಸ ಬರಲಿ
ಸ್ನೇಹ ಸೌಹಾರ್ದತೆ ಇರಲಿ।

ಆ ಜಾತಿ ಈ ಜಾತಿ ಬೇಡ
ನಾವೆಲ್ಲ ಈ ನಾಡು ಬೆಳಗುವ
ಚಿಲ್ಲರೆ ಮಾತು ಚಿಲ್ಲರೆತನ ಬೇಡ
ಸ್ವಾಭಿಮಾನ ನಿಸ್ವಾರ್ಥದಿ ಬಾಳುವ।

ಚಂದದ ಮಾತು ನುಡಿಯೋಣ
ನಾಲಿಗೆ ಹರಬಿಟ್ಟರೆ ಕೇಡು ಅರಿಯೋಣ
ನಗು ಮುಖದಿ ಎಲ್ಲರೂ ನಡೆಯೋಣ
ಭಾರತ ಮಾತೆಯ ಕೀರ್ತಿ ಹೆಚ್ಚಿಸೋಣ।

– ಚಂದ್ರಶೇಖರಯ್ಯ ರೋಣದಮಠ.

# ಪೇಶ್ವೆ ಸೈನ್ಯದ ವಿರುದ್ಧ ಭೀಮ ಕೋರೆಗಾಂವ್ ಯುದ್ಧದ ವಿಜಯೋತ್ಸವ ಸ್ಮರಣೆ



■ ಹಂಪಿ ಟೈಮ್ಸ್ ಹರಪನಹಳ್ಳಿ
ಜ. 1 ರಂದು ಭೀಮ ಕೋರೆಗಾಂವ್ ಯುದ್ಧದ ವಿಜಯೋತ್ಸವವನ್ನು ದೇಶದಾದ್ಯಂತ ಶೋಷಿತ ಸಮುದಾಯಗಳು ಆಚರಣೆ ಮಾಡುತ್ತಿವೆ ಎಂದು ಡಿ.ಎಸ್.ಎಸ್. ರಾಜ್ಯ ಸಂಚಾಲಕ ಕಬ್ಬಳ್ಳಿ ಮೈಲಾಪ್ಪ ಹೇಳಿದರು.

ಪಟ್ಟಣದ ಪ್ರವಾಸಿ ಮಂದಿರದ ವೃತ್ತದ ಅವರಣದಲ್ಲಿ ದಲಿತ ಸಂಘರ್ಷ ಸಮಿತಿ ವತಿಯಿಂದ ಡಾ.ಬಿ.ಆರ್.ಅಂಬೇಡ್ಕರ್ ಮಹಾರ್ ವೀರಯೋಧರ ಭೀಮ ಕೋರೆಗಾಂವ್ 207ನೇ ವರ್ಷದ ವಿಜಯೋತ್ಸವ ಕಾರ್ಯಕ್ರಮದಲ್ಲಿ ಅವರು ಮಾತನಾಡಿದರು.

ಕೋರೆಗಾಂವ್ ಕದನ ಭಾರತದ ಇತಿಹಾಸದಲ್ಲೇ ಮಹತ್ವದ ಸ್ಥಾನ ಪಡೆದಿದೆ. 500 ಮಂದಿ ಮಹಾರ್ ಹೋರಾಟಗಾರರು ಆಹಾರ, ನೀರು ಹಾಗೂ ವಿಶ್ರಾಂತಿ ಇಲ್ಲದೆ 28 ಸಾವಿರ ಪೇಶ್ವೆಗಳ ಸೈನ್ಯದ ವಿರುದ್ಧ ನಿರಂತರ 12 ಗಂಟೆ ಕಾದಾಡಿ ಸ್ಮರಣೀಯ ವಿಜಯ ಸಾಧಿಸಿ ಇತಿಹಾಸ ಸೃಷ್ಟಿಸಿದರು. ಈ ಭಾಗವಾಗಿ ಭೀಮಾ ಕೋರೆಗಾವ್ ವಿಜಯೋತ್ಸವ ಆಚರಣೆ ಮಾಡಲಾಗುತ್ತಿದೆ ಎಂದು ಹೇಳಿದರು.

ದಲಿತ ಸಂಘರ್ಷ ಸಮಿತಿ ಜಿಲ್ಲಾ ಸಂಚಾಲಕ ಸಿ.ಎಂ.ಶಿವಣ್ಣ ಮಾತನಾಡಿ, 28 ಸಾವಿರ ಪೇಶ್ವೆಗಳನ್ನು 500 ಮಹಾರ್ ಸೈನಿಕರು ಸೋಲಿಸಿ ವಿಜಯಪತಾಕೆ ಹಾರಿಸಿದ ದಿನವನ್ನು ಕೋರೆಗಾಂವ್ ವಿಜಯೋತ್ಸ ವವಾಗಿ ದೇಶಾದ್ಯಂತ ಆಚರಣೆ ಮಾಡಲಾಗುತ್ತಿದೆ. ಪೇಶ್ವೆಗಳ ಆಡಳಿತದಲ್ಲಿದ್ದ ಜಾತಿ, ಅಸ್ಪೃಶ್ಯತೆ, ಮೇಲುಕೀಳುಗಳ ವಿರುದ್ಧ ನಿಂತು ಮಾನವೀಯ ಮೌಲ್ಯಗಳನ್ನು ಪಡೆದು ಕೊಳ್ಳಲು ಹಂಬಲಿಸುವ ಮಹಾರ್ ಸೈನಿಕರ ಧೈರ್ಯ ಸಾಹಸ, ಕೆಚ್ಚೆದೆಯ ಹೋರಾಟವಾಗಿದೆ," ಎಂದರು.

ಕರ್ನಾಟಕ ದಲಿತ ಸಂಘರ್ಷ ಸಮಿತಿ ಭೀಮಾವಾದ ಸಂಘದ ತಾಲೂಕು ಅದ್ಯಕ್ಷ ಕೆ.ಸುಭಾಸ್ ಮಾತನಾಡಿ, ಎಸ್ಸಿ ಎಸ್ಟಿ ಹಿಂದುಳಿದ ಮತ್ತು ಶೋಷಿತರ ಶೌರ್ಯದ ಸಂಕೇತವೇ ಕೋರೆಗಾಂವ್. 207ನೇ ಭೀಮಾ ಕೋರೆಗಾಂವ್ ವಿಜಯೋತ್ಸವದ ಅಂಗವಾಗಿ ಪಟ್ಟಣದ ಐಬಿ ವೃತದಲ್ಲಿ ಡಾ.ಬಿ.ಆರ್. ಅಂಬೇಡ್ಕರ್ ಭಾವಚಿತ್ರದ ದೊಡ್ಡ ಬ್ಯಾನರ್ ಅಳವಡಿಸಿ ಕೇಕ್ ಕತ್ತರಿಸಿ ವಿಜಯೋತ್ಸವ ಆಚರಿಸಿದರು.

ಚಲುವಾದಿ ಸಮಾಜದ ಮುಖಂಡ ಗುಂಡಗತ್ತಿ ಕೊಟ್ರಪ್ಪ ಮಾತನಾಡಿದರು.

ಕರ್ನಾಟಕ ದಲಿತ ಸಂಘರ್ಷ ಸಮಿತಿ ಭೀಮಾವಾದ ಸಂಘದ ವತಿಯಿಂದ ಪಟ್ಟಣದ ಐಬಿ ವೃತ್ತದಲ್ಲಿ ಮಹಾರ್ ವೀರಯೋಧರ ಭೀಮ ಕೋರೆಗಾಂವ್ 207ನೇ ವರ್ಷದ ವಿಜಯೋತ್ಸವ ಹಾಗೂ ಪಟ್ಟಣದ ಪ್ರಮುಖ ರಸ್ತೆಗಳಲ್ಲಿ ಬೈಕ್ ರ‍್ಯಾಲಿ ನಡೆಸಲಾಯಿತು.

ಕರ್ನಾಟಕ ದಲಿತ ಸಂಘರ್ಷ ಸಮಿತಿ ಭೀಮಾವಾದ ಸಂಘದ ತಾಲೂಕು ಅದ್ಯಕ್ಷ ಕೆ.ಸುಭಾಸ್, ವಿಜಯನಗರ ಜಿಲ್ಲಾ ಡಿ.ಎಸ್.ಎಸ್ ಸಂಚಾಲಕ (ಭೀಮವಾದ ) ಯಲ್ಲಪ್ಪ ಸವಣೂರ, ಪುಣಬಗಟ್ಟಿ ಮಂಜುನಾಥ್, ಶೃಂಗಾರತೋಟ ಪ್ರಶಾಂತ್,ಪುಣಬಗಟ್ಟಿಸಂತೋಷ,ಮಲ್ಲಿಕಾರ್ಜುನ ಪೂಜಾರ್, ಕೆ.ಕೋಟೆಪ್ಪ, ಛತ್ರಪತಿ, ಬಿ.ಚಂದ್ರಪ್ಪ, ಮುತ್ತುರಾಜ್ ಬಿದ್ದಾಡಿ, ಸಿ.ಪ್ರಕಾಶ್, ಜಿ.ಶ್ರೀಕಾಂತ್, ಪರಮೇಶಿ ಸೇರಿದಂತೆ ಅನೇಕರು ಭಾಗವಹಿಸಿದ್ದರು.

## ಜ. 3 & 4 ರಂದು ಕೊಪ್ಪಳದಲ್ಲಿ ಕ್ರೀಡಾ ವಸತಿ ನಿಲಯಗಳಿಗೆ ಆಯ್ಕೆ ಪ್ರಕ್ರಿಯೆ

■ ಹಂಪಿ ಟೈಮ್ಸ್ ಕೊಪ್ಪಳ
ರಾಜ್ಯದ ವಿವಿಧ ಕ್ರೀಡಾ ವಸತಿ ನಿಲಯಗಳಿಗೆ ಹಾಗೂ ಕೊಪ್ಪಳ ಜಿಲ್ಲಾ ಕ್ರೀಡಾ ವಸತಿ ನಿಲಯಗಳಿಗೆ ಆಯ್ಕೆ ಪ್ರಕ್ರಿಯೆಯು ಜನವರಿ 3 ಮತ್ತು 4 ರಂದು ಬೆಳಿಗ್ಗೆ 10.30 ರಿಂದ ಕೊಪ್ಪಳ ಜಿಲ್ಲಾ ಕ್ರೀಡಾಂಗಣದಲ್ಲಿ ನಡೆಯಲಿದೆ.
2025–26ನೇ ಸಾಲಿಗೆ ಕರ್ನಾಟಕ ರಾಜ್ಯದ ವಿವಿಧ ಸ್ಥಳಗಳಲ್ಲಿರುವ ಯುವ ಸಬಲೀಕರಣ ಮತ್ತು ಕ್ರೀಡಾ ಇಲಾಖೆಯ ಕ್ರೀಡಾ ಶಾಲೆ, ವಸತಿ ನಿಲಯಕ್ಕೆ ಕ್ರೀಡಾಪಟುಗಳನ್ನು ಆಯ್ಕೆ ಮಾಡುವ ಸಂಬಂಧ ಕೊಪ್ಪಳ ಜಿಲ್ಲಾ ಕ್ರೀಡಾಂಗಣದಲ್ಲಿ ಜರುಗಲಿರುವ ಈ ಆಯ್ಕೆ ಪ್ರಕ್ರಿಯೆಯಲ್ಲಿ ಪ್ರಸ್ತುತ 4, 7 ಮತ್ತು 10ನೇ ತರಗತಿಯಲ್ಲಿ ವ್ಯಾಸಂಗ ಮಾಡುತ್ತಿರುವ ವಿದ್ಯಾರ್ಥಿ, ವಿದ್ಯಾರ್ಥಿನಿಯರು ಈ ಭಾಗವಹಿಸಬಹುದಾಗಿದೆ.
ಹೆಚ್ಚಿನ ಮಾಹಿತಿಗಾಗಿ ಖೋಖೋ ತರಬೇತುದಾರರಾದ ಎ.ಎನ್ ಯತಿರಾಜು ಮೊ.ಸಂ: 9448633146 ಹಾಗೂ ರೋಹಿಣಿ ಪರ್ವತೀಕರ ಮೊ.ಸಂ: 8217324522, ವಾಲಿಬಾಲ್ ತರಬೇತಿದಾರ ರಾದ ಕಮಲ್ ಸಿಂಗ್ ಬಿಸ್ಟ್ ಮೊ.ಸಂ: 6360146300, ಸುರೇಶ ಮೊ.ಸಂ: 9901527333, ಅಥ್ಲೆಟಿಕ್ಸ್ ತರಬೇತುದಾರ ವಿಶ್ವನಾಥ ಕರ್ಲಿ ಮೊ.ಸಂ: 8660455969, ಕೊಪ್ಪಳ ಸಣ್ಣ ವಾಲಿಬಾಲ್ ತರಬೇತಿ ಕೇಂದ್ರದ ವಾಲಿಬಾಲ್ ತರಬೇತುದಾರರಾದ ದೀಪಾ ಮೊ.ಸಂ: 8088143003, ಇವರಿಗೆ ಸಂಪರ್ಕಿಸಬಹುದು ಎಂದು ಯುವ ಸಬಲೀಕರಣ ಮತ್ತು ಕ್ರೀಡಾ ಇಲಾಖೆ ಸಹಾಯಕ ನಿರ್ದೇಶಕರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

## ಹಗರಿಬೊಮ್ಮನಹಳ್ಳಿಯಲ್ಲಿ ಗ್ರಾಮ ಸಹಾಯಕ ಹುದ್ದೆಗೆ ಅರ್ಜಿ ಅಹ್ವಾನ

■ ಹಂಪಿ ಟೈಮ್ಸ್ ಹಗರಿಬೊಮ್ಮನಹಳ್ಳಿ
ತಾಲೂಕಿನ ತಂಬ್ರಹಳ್ಳಿ ಹೋಬಳಿಯ ಆನಂದದೇವನಹಳ್ಳಿ ಗ್ರಾಮದಲ್ಲಿ ಖಾಲಿಯಿರುವ ಗ್ರಾಮ ಸಹಾಯಕನ ಹುದ್ದೆಗೆ ಅರ್ಹ ಅಭ್ಯಥಿಗಳಿಂದ ಅರ್ಜಿ ಸಲ್ಲಿಸಲು ಅವಕಾಶ ನೀಡಲಾಗಿದೆ ಎಂದು ತಹಶೀಲ್ದಾರ ಆರ್.ಕವಿತಾ ತಿಳಿಸಿದ್ದಾರೆ.

ಪ್ರಸ್ತುತ ಖಾಲಿಯಿರುವ ಒಂದು ಹುದ್ದೆಗೆ, ಕನ್ನಡ ಮಾಧ್ಯಮದಲ್ಲಿ ಕನಿಷ್ಠ 7ನೇ ತರಗತಿ ಉತ್ತೀರ್ಣವಾಗಿರಬೇಕು. ಅರ್ಜಿ ಸಲ್ಲಿಸುವ ಅವಧಿಯಲ್ಲಿ ಅಭ್ಯರ್ಥಿಯ ವಯೋಮಿತಿ ಕನಿಷ್ಠ 25 ವರ್ಷ ಮೇಲ್ಪಟ್ಟು 45 ವರ್ಷಗಳ ಒಳಗೆ ಇರತಕ್ಕದ್ದು, ಅರ್ಜಿ ಸಲ್ಲಿಸಲು ನಿಗದಿಪಡಿಸಿರುವ ಶುಲ್ಕ ಪಾವತಿಸಲು ಪ್ರವರ್ಗ 2ಎ, ಪ್ರವರ್ಗ 2ಬಿ, ಪ್ರವರ್ಗ 3ಎ, ಪ್ರವರ್ಗ3ಬಿ, ಮತ್ತು ಸಾಮಾನ್ಯ ವರ್ಗಕ್ಕೆ ರೂ.200 ಹಾಗೂ ಪರಿಶಿಷ್ಟ ಜಾತಿ, ಪರಿಶಿಷ್ಟ ಪಂಗಡ, ಪ್ರವರ್ಗ 1 ಕ್ಕೆ ರೂ.100 ಪಾವತಿಸಿ 2025 ರ ಜನವರಿ 31 ರವರೆಗೆ ಅರ್ಹ ಅಭ್ಯರ್ಥಿಗಳು ಅರ್ಜಿ ಸಲ್ಲಿಸಲು ಅವಕಾಶ ನೀಡಲಾಗಿದೆ. ನಿಗಧಿತ ನಮೂನೆಯ ಅರ್ಜಿಯನ್ನು ಭರ್ತಿ ಮಾಡಿ ತಹಶೀಲ್ದಾರ ಕಚೇರಿಗೆ ಖುದ್ದು ಸಲ್ಲಿಸಬೇಕೆಂದು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

## ಜ.02 ರಂದು ಜಿಲ್ಲಾ ಮತ್ತು ತಾಲ್ಲೂಕು ಮಟ್ಟದ ಅಧಿಕಾರಿಗಳಿಗೆ ಕಾರ್ಯಾಗಾರ

■ ಹಂಪಿ ಟೈಮ್ಸ್ ಬಳ್ಳಾರಿ
ರಾಜ್ಯ ಮಕ್ಕಳ ಹಕ್ಕುಗಳ ರಕ್ಷಣಾ ಆಯೋಗ ಬೆಂಗಳೂರು, ಜಿಲ್ಲಾ ಕಾನೂನು ಸೇವೆಗಳ ಪ್ರಾಧಿಕಾರ, ಜಿಲ್ಲಾಡಳಿತ, ಜಿಲ್ಲಾ ಪಂಚಾಯತ್, ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ, ಮಕ್ಕಳ ವಿಶೇಷ ಪೊಲೀಸ್ ಘಟಕ, ಕಾರ್ಮಿಕ ಇಲಾಖೆ, ಶಾಲಾ ಶಿಕ್ಷಣಾ ಮತ್ತು ಸಾಕ್ಷರತಾ ಇಲಾಖೆ ಹಾಗೂ ಜಿಲ್ಲಾ ಮಕ್ಕಳ ರಕ್ಷಣಾ ಘಟಕ ಇವರ ಸಂಯುಕ್ತಾಶ್ರಯದಲ್ಲಿ ಜ.02 ರಂದು ಮಧ್ಯಾಹ್ನ 02 ಗಂಟೆಗೆ ಜಿಲ್ಲಾ ಪಂಚಾಯತ್‌ನ ನಜೀರ್ ಸಭಾಂಗಣದಲ್ಲಿ 'ಉಚಿತ ಮತ್ತು ಕಡ್ಡಾಯ ಶಿಕ್ಷಣ ಹಕ್ಕು ಕಾಯ್ದೆ–2009' ರ ಕುರಿತು ಜಿಲ್ಲಾ ಮತ್ತು ತಾಲ್ಲೂಕು ಮಟ್ಟದ ಅಧಿಕಾರಿಗಳಿಗೆ ಕಾರ್ಯಾಗಾರ ಏರ್ಪಡಿಸಲಾಗಿದೆ.
ರಾಜ್ಯ ಮಕ್ಕಳ ಹಕ್ಕುಗಳ ರಕ್ಷಣಾ ಆಯೋಗದ ಸದಸ್ಯರಾದ ಶಶಿಧರ ಕೋಸಂಬೆ ಅವರು ಕಾರ್ಯಕ್ರಮ ಉದ್ಘಾಟಿಸುವರು. ಜಿಲ್ಲಾಧಿಕಾರಿ ಪ್ರಶಾಂತ್ ಕುಮಾರ ಮಿಶ್ರಾ ಅವರು ಅಧ್ಯಕ್ಷತೆ ವಹಿಸುವರು.
ಜಿಲ್ಲಾ ಕಾನೂನು ಸೇವೆಗಳ ಪ್ರಾಧಿಕಾರದ ಸದಸ್ಯ ಕಾರ್ಯದರ್ಶಿ ಹಾಗೂ ಹಿರಿಯ ಸಿವಿಲ್ ನ್ಯಾಯಾಧೀಶರಾದ ರಾಜೇಶ್ ಎನ್. ಹೊಸಮನೆ, ಜಿಲ್ಲಾ ಪಂಚಾಯತ್‌ನ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ ರಾಹುಲ್ ಶರಣಪ್ಪ ಸಂಕನೂರ, ಹಾಗೂ ಇತರರು ಉಪಸ್ಥಿತರಿರುವರು ಎಂದು ಪ್ರಕಟಣೆ ತಿಳಿಸಿದೆ.

## ವೀಡಿಯೋ ಟ್ರೇಲರ್ ಸಾಂಗ್‌ನೊಂದಿಗೆ ಶ್ರೀಮಠದ ಜಾತ್ರೆಗೆ ಭಕ್ತರಿಗೆ ಆಹ್ವಾನ



■ ಹಂಪಿ ಟೈಮ್ಸ್ ಕೊಪ್ಪಳ:
ಸಂಸ್ಥಾನ ಶ್ರೀ ಗವಿಮಠ ಜಾತ್ರೆಯೂ ಪ್ರತಿ ವರ್ಷ ವಿಭಿನ್ನ, ವಿಶಿಷ್ಟ ರೂಪದಲ್ಲಿ ಅರ್ಥ ಪೂರ್ಣವಾಗಿ ಜರುಗುತ್ತಿದೆ. ಆಧುನಿಕತೆಯ ಸ್ಪರ್ಶದ ಜೊತೆಗೆ 2025 ರ ಮಹಾಜಾತ್ರೆಯ ಜಾತ್ರಾ ಮಹೋತ್ಸವದ ಆಹ್ವಾನ ಶ್ರೀಮಠದ ಭಕ್ತರಿಗೆ ನೇರವಾಗಿ ತಲುಪಿಸುವ ಸತ್ಕಾರ್ಯದಲ್ಲಿ ತೊಡಗಿದೆ.
ಈ ಬಾರಿಯೂ ಜನೇವರಿ 15, 16 ಹಾಗೂ 17ರಂದು ನಡೆಯುವ ಅಜ್ಜನ ಜಾತ್ರೆಗೆ ಭಕ್ತರನ್ನು ಆಹ್ವಾನಿಸುವ ಆ ದೃಶ್ಯವನ್ನು ಡ್ರೋಣ್ ಕ್ಯಾಮರಾದ ಮೂಲಕ ಸೆರೆಹಿಡಿದ ವೀಡಿಯೊದೊಂದಿಗೆ ಡಿಜಿಟಲ್ ತಂತ್ರಜ್ಞಾನವನ್ನು ಬಳಸಿಕೊಂಡು ತಯಾರಿಸಿದ ಟ್ರೇಲರ್ ಸಾಂಗ್ ಜ.2. ರಂದು ಬೆಳಿಗ್ಗೆ 11:00 ಗಂಟೆಗೆ– ಗವಿಮಠದ ಮುಂಭಾಗದಲ್ಲಿ ಸ್ವಚ್ಛತಾ ಸೇವೆಗೈಯುತ್ತಿರುವ ಸೇವಾ ಸಿಬ್ಬಂದಿಗಳಿಂದ (ಸಫಾಯಿಚಾರಿ) ಇವರಿಂದ ಬಿಡುಗಡೆಯಾಗುವದು ಈ ಜಾತ್ರೆಯ ವಿಶೇಷತೆ ಯಾಗಿದೆ. ಇದರಲ್ಲಿ
"ಭಕ್ತಿಯ ಮನೆ ಮನಗಳಲ್ಲಿ
ಮುಕ್ತಿಯ ಕೆನೆ ನೆನಹಿನಲ್ಲಿ
ಓಂಕಾರವು ಕೋಟೆ ಕಟ್ಟಿ
ಬೆಟ್ಟಗಳು ಧ್ಯಾನದಲಿ
ಸಿದ್ಧ ಪುರುಷ ಗವಿಸಿದ್ದನೇ
ಇಷ್ಟ ಪ್ರಾಣ ಭಾವದಲ್ಲಿ
ಜಾತ್ರೋತ್ಸವ ನಮ್ಮ ಯಾತ್ರೋತ್ಸವ"
ಎಂಬ ಅಧಮ್ಯ, ಸುಂದರ ಭಕ್ತಿ ತುಂಬಿದ ಸಾಲುಗಳಿರುವ ಈ ಸಾಹಿತ್ಯಕ್ಕೆ ಜೀವ ತುಂಬುವ ಕಂಠಸಿರಿಯ ಕೊಪ್ಪಳದ ಗಾಯಕ ಸದಾಶಿವ ಪಾಟೀಲರು ಮೈದುಂಬಿ ಹಾಡಿರುತ್ತಾರೆ. ಈ ಹಾಡಿನಲ್ಲಿ ಶ್ರೀ ಗವಿಸಿದ್ಧೇಶ್ವರ ಮಹಾರಥೋತ್ಸವದ ವೈಭವದ ದೃಶ್ಯ, ಶ್ರೀ ಶಿವಶಾಂತವೀರ ಹಾಗೂ ಶ್ರೀ ಮರಿಶಾಂತವೀರ ಮಹಾಸ್ವಾಮಿಗಳವರ ಮೂರ್ತಿಶಿಲ್ಪ, ಭಕ್ತಿ ಸಂಗೀತ, ಚಿಕೇನಕೊಪ್ಪದ ಶರಣರ ಧೀರ್ಘದಂಡ ನಮಸ್ಕಾರ, ಜಾತ್ರೆಗೆ ಆಗಮಿಸುವ ಭಕ್ತರ ಪಾದಯಾತ್ರೆ, ಸಾಮಾಜಿಕ ಜಾಗೃತಿ ಜಾಥಾ ಸನ್ನಿವೇಶ ಒಳಗೊಂಡಿದೆ. ತೆಪ್ಪೋತ್ಸವ, ಜಾತ್ರಾ ಮಹಾದಾಸೋಹದ ಪ್ರಸಾದದ ಸಿದ್ಧತೆ ಮತ್ತು ಭಕ್ತರ ಸೇವನೆ, ಶ್ರೀಮಠದ ಜಾತ್ರೆಯ ಚಿತ್ರಿತ ವೈಶಿಷ್ಟ್ಯಪೂರ್ಣ ಪುಣ್ಯಕಾರ್ಯಗಳು ಇದರಲ್ಲಿ ಅಂತರ್ಗತವಾಗಿವೆ. ನಂದಿಕೋಲು ಕುಣಿತ, ಶ್ರೀ ಸಿದ್ಧೇಶ್ವರ ಮೂರ್ತಿ ಮೆರವಣಿಗೆ ಮತ್ತು ಭಕ್ತಿಯ ಸಿಂಚನದ ಚಿತ್ರ ವಿಡಿಯೋ ಸೊಬಗನ್ನು ಹೆಚ್ಚಿಸಿದೆ. ಇಲ್ಲಿನ ಪ್ರಾಕೃತಿಕ ಬೆಟ್ಟ–ಗುಡ್ಡಗಳ, ಕೆರೆ, ಸಹಜತೆಯ ವೈಭವ ಮತ್ತಷ್ಟು ವಿಡಿಯೋದ ಆಕರ್ಷಣೆ ಹೆಚ್ಚಿಸಿವೆ.
ವಿದ್ಯಾರ್ಥಿಗಳ ಬಾಳಿಗೆ ಬೆಳಕಾಗಿರುವ ಶ್ರೀ ಗವಿಮಠದ ಉಚಿತ ವಸತಿ ಹಾಗೂ ಪ್ರಸಾದ ನಿಲಯದ ವಿದ್ಯಾರ್ಥಿಗಳಿಂದ ನುಡಿ ಸೇವೆಗೈಯುವುತ್ತಿರುವದು ಮತ್ತೊಂದು ವೈಶಿಷ್ಟ್ಯತೆಯಾಗಿದೆ. ಈ ಹಾಡನ್ನು ಸುಮಾರು 1500 ವಸತಿ ನಿಲಯದ ವಿದ್ಯಾರ್ಥಿಗಳು ಮತ್ತು ಸಾವಿರಾರು ಮೇಣದ ದೀಪಗಳು ಹಾಗೂ ಪೇಪರ ಗ್ಲಾಸುಗಳನ್ನು ಬಳಸಿ ಚಿತ್ರಿಕರಣ ಮಾಡಲಾಗಿರುವ ವೀಡಿಯೋ ಟ್ರೇಲರ್ ಸಾಂಗ್‌ನೊಂದಿಗೆ ಶ್ರೀಮಠದ ಭಕ್ತರಿಗೆ ಈ ವರ್ಷದ ಜಾತ್ರೆಗೆ ಆಹ್ವಾನ ನೀಡಲಾಗಿದೆ ಎಂದು ಮಠದ ಪ್ರಕಟಣೆಯಲ್ಲಿ ತಿಳಿಸಿದೆ.

**SSLC** ಈ ಬಾರಿ ಫಲಿತಾಂಶ ನಮ್ಮದೆ ಹೈಸ್ಕೋರ್‌ಗೆ ಈಗಿಂದಲೇ ಅಭ್ಯಾಸ ಮಾಡಿ
HAMPI TIMES MARGADARSHI
ಮನಸ್ಸು ಮಾಡು - ಕರ್ತವ್ಯ ನಿಷ್ಠನಾಗು - ಕಾದು ನೋಡು
ಹಂಪಿ ಟೈಮ್ಸ್ ಇ–ಪೇಪರ್‌ಗಾಗಿ ಭೇಟಿ ನೀಡಿ: https://epaper.hampitimes.com

ನಿನ್ನ ಏಳಿಗೆಗೆ ನೀನೆ ಶಿಲ್ಪಿ
ಹಂಪಿ ಟೈಮ್ಸ್ ಮಾರ್ಗದರ್ಶಿ SSLC: ಇಂಗ್ಲೀಷ್

## Sub : English (S.L) Prose : Science and Hope of Survival

**Most important 2 or 3 marks questions and answers.**

**1. Give a few examples to illustrate that scientists are the most practical people in the world?**
Ans: All new technologies, all new brands of industry from defense to environment came from fundamental science. For example antibiotics, electronics, biotechnology, synthetic fibers, green revolution and genetic forensic diagnosis are all the gifts of basic science.

**2. What reward do the scientists get? How are they different from lawyers, doctors and businessmen?**
Ans: The discovery itself is the reward of the scientists. The scientists get lesser money than the lawyers, doctors and businessmen. But they enjoy freedom, camaraderie and independence.

**3. Why were the technical experts summoned by the three super powers of the world ?**
Ans: Three super powers met with a problem and they wanted to sign an agreement to stop nuclear tests, if one of the participants violates and made secret underground nuclear explosion, So how the others could detect . Because of that technical experts summoned to detect the violation.

**4. Who will be head hunted by financial institutions and pharmaceutical industries? Why?**
Ans: The people trained in theoretical physics are head hunted by the financial Institutions. Those trained in biological research become founders and directors in Pharmaceutical industry. Because the knowledge of basic sciences helps them to think and work practically.

**5. What was the problem that the 'nuclear powers' faced?**
Ans: The nuclear powers signed the agreement to stop the test of nuclear weapons. But the problem was that if any one violated the agreement by secret underground testing, how to detect that was not known.

**6. Scientists are the most practical people in the world. Justify the statement.**
Ans: All new technologies, all new brands of industry are the result of research by scientists. It is through their work that we have medicines, electronics, synthetic fibers, and new sources of energy, modes of transport and the green revolution. This proves that scientists are the most practical people in the world.

**7. Who can best ensure our safety in the world? How?**
Ans: Scientists can best ensure our safety in the world. By their Research in basic science they can ensure our safety.

**8. According to Keilis Borok "Science is an exciting adventure". Explain. OR Despite low income, why do some people choose to become scientists?**
Ans: According to Keilis Borok, some people choose to be scientist, because they cannot live without science .To them science is an exciting adventure and the discovery they make is the reward .Instead of money ,they get the benefits of team work ,freedom, camaraderie and independence and the joy of uncovering one of the nature's mysteries

**9. What was the important decision taken by the politicians before the Geneva Summit? How does it help for the survival of humanity?**
Ans: The important decision taken by the politicians before the Geneva Summit was the Ban on nuclear weapon test. This would be a hope for the survival of humanity as there will be no competition for developing nuclear weapons.

**10. Why does Keilis Borok feel that Science is the indispensable guardian and caretaker of humanity?**
Ans: Keilis Borok feels that only the basic research in science can create aspring board for developing new disasters preparedness industry, science is not the beginning and not the end either, if humanly used it is their indispensable guardian and caretaker of humanity

Collected by : RB Gurubasavaraj Teacher. GHS Basarakodu. H.B.Halli Taluk. Vijayanagara Dist

ಶ್ರೀ ಜಗದ್ಗುರು ಕೊಟ್ಟೂರುಸ್ವಾಮಿ ಸಂಸ್ಥಾನಮಠ, ಹೊಸಪೇಟೆ

ಈ ಬಾರಿ ಫಲಿತಾಂಶ ನಮ್ಮದೇ
ಹಂಪಿ ಟೈಮ್ಸ್
ವಿಜಯನಗರದ ಹೆಮ್ಮೆ

**ಎಸ್ಸೆಸ್ಸೆಲ್ಸಿ ವಿಜ್ಞಾನ ಚಿತ್ರ ಸ್ಪರ್ಧೆ-6**

ವಾರ್ಷಿಕ ಪರೀಕ್ಷೆಗೆ ಇಂದಿನಿಂದಲೇ ಸಿದ್ಧರಾಗೋಣ...


ವಿಷಯ: ಲೋಹದ ಮೇಲೆ ಹಬೆಯ ವರ್ತನೆಯನ್ನು ತೋರಿಸುವ ಉಪಕರಣದ ಚಿತ್ರ ಬಿಡಿಸಿ ಭಾಗಗಳನ್ನು ಗುರುತಿಸಿ ?

ಸೂಚನೆ: ಎ/4 ಹಾಳೆಯ ಅರ್ಧ ಭಾಗದಲ್ಲಿ ಪೆನ್ಸಿಲ್ ಬಳಸಿ ಚಿತ್ರ ಬಿಡಿಸಬೇಕು. ಶಾಲೆಯ ಶಿಕ್ಷಕರು ವಿದ್ಯಾರ್ಥಿಗಳು ಬಿಡಿಸಿದ ಅತ್ಯುತ್ತಮ ಒಂದು ಚಿತ್ರವನ್ನು ವಿದ್ಯಾರ್ಥಿಯ ಹೆಸರು, ಫೋಟೊ, ಮಾರ್ಗದರ್ಶಿ ಶಿಕ್ಷಕರ ಹೆಸರು ಮತ್ತು ಶಾಲೆ ವಿಳಾಸದೊಂದಿಗೆ ವಾಟ್ಸಪ್‌ಗೆ ಕಳಿಸಲು ಮನವಿ.

ರಾಜ್ಯಾದ್ಯಂತ 10ನೇ ತರಗತಿ ಓದುತ್ತಿರುವ ವಿದ್ಯಾರ್ಥಿಗಳು ಶುಕ್ರವಾರ ತಮ್ಮ ಶಾಲೆಯಲ್ಲಿ ಶಿಕ್ಷಕರ ಸಮ್ಮುಖದಲ್ಲಿ 10 ನಿಮಿಷದೊಳಗೆ ಚಿತ್ರ ಬಿಡಿಸಿ, ಮುಖ್ಯಗುರುಗಳು/ಶಿಕ್ಷಕರ ಸಹಿ ಮತ್ತು ನೆರವಿನೊಂದಿಗೆ ಶುಕ್ರವಾರ ಸಂಜೆ 6 ಗಂಟೆಯೊಳಗೆ ವಾಟ್ಸಪ್ ನಂಬರ್‌ಗೆ ಕಳುಹಿಸಬಹುದು.

HAMPI TIMES VIJAYANAGARA

ಶಾಲೆಯ ದಿ ಬೆಸ್ಟ್ ಚಿತ್ರ ಕಳಿಸುವ ವಾಟ್ಸ್‌ಪ್ ನಂ: 99726 03099
ಶಾಲೆಯಲ್ಲಿ ಚಿತ್ರ ಬಿಡಿಸುವ ಸಾಮೂಹಿಕ ಫೋಟೊ ಕಳಿಸುವ ವಾಟ್ಸ್‌ಪ್ ನಂ: 94486 33038



## ತುಂಗಭದ್ರಾ ನೀರಿನ ಮಟ್ಟ

ಬುಧವಾರ : 01-01-2025

| | |
|---|---|
| ಗರಿಷ್ಠ ಮಟ್ಟ | 1633 ಅಡಿ |
| ಇಂದಿನ ಮಟ್ಟ | 1626.32 ಅಡಿ |
| ಒಳ ಹರಿವು | 290 ಕ್ಯುಸೆಕ್ |
| ಹೊರ ಹರಿವು | 9073 ಕ್ಯುಸೆಕ್ |
| ಇಂದಿನ ಸಾಮರ್ಥ್ಯ | 80.891 ಟಿಎಂಸಿ |
| ಗರಿಷ್ಠ ಸಾಮರ್ಥ್ಯ | 105.788 ಟಿಎಂಸಿ |
| ಕಳೆದ ವರ್ಷ ಇದೇ ದಿನ | |
| ಇಂದಿನ ಮಟ್ಟ | 1589.08 ಅಡಿ |
| ಒಳ ಹರಿವು | 0 ಕ್ಯುಸೆಕ್ |
| ಹೊರ ಹರಿವು | 0 ಕ್ಯುಸೆಕ್ |
| ಸಾಮರ್ಥ್ಯ | 10.278 ಟಿಎಂಸಿ |

## ನಿತ್ಯ ಪಂಚಾಂಗ

ಮಾಸ: ಪುಷ್ಯ । ಸಂವತ್ಸರ: ಕ್ರೋಧಿ

02-01-2025 - ಗುರುವಾರ

| | |
|---|---|
| ತಿಥಿ | : ತೃತೀಯ |
| ಪಕ್ಷ | : ಶುಕ್ಲ |
| ನಕ್ಷತ್ರ | : ಶ್ರಾವಣ |
| ಯೋಗ | : ಹರ್ಷಣ |
| ಕರಣ | : ತೈತುಲ |
| ಸೂರ್ಯೋದಯ | : 07:09:53 |
| ಸೂರ್ಯಾಸ್ತ | : 17:52:21 |
| ರಾಹು ಕಾಲ | : 13:51-15:12 |
| ಯಮಘಂಡ ಕಾಲ | : 07:10-08:30 |
| ಗುಳಿಕ ಕಾಲ | : 09:51-11:11 |

ಹಂಪಿ ಟೈಮ್ಸ್ ವಿಜಯನಗರದ ಹೆಮ್ಮೆ
ವಿಜಯನಗರ ಜಿಲ್ಲೆಯ ಸಮಗ್ರ ಸುದ್ದಿ, ವಿಜ್ಞಾನ, ವಿಶೇಷ ಲೇಖನಗಳನ್ನು ಓದಲಿಚ್ಛಿಸುವವರು ಈ ಕೆಳಗಿನ ಕ್ಯೂಆರ್ ಕೋಡ್ ಸ್ಕ್ಯಾನ್ ಮಾಡಿ, ವಾಟ್ಸಪ್ ಗ್ರೂಪಿಗೆ ಜಾಯಿನ್ ಆಗಿ ಹಂಪಿ ಟೈಮ್ಸ್ ಇ-ಪತ್ರಿಕೆ ಓದಿ.
Only Admins can Send Messages to this Group
Join with Us

## ಅಲ್ಪಸಂಖ್ಯಾತರ ಕಲ್ಯಾಣ ಇಲಾಖೆ: ಅರ್ಜಿ ಸಲ್ಲಿಕೆಯ ಅವಧಿ ವಿಸ್ತರಣೆ

**ಹಂಪಿ ಟೈಮ್ಸ್ ಬಳ್ಳಾರಿ**

ಪ್ರಸ್ತಕ ಸಾಲಿಗೆ ಅಲ್ಪಸಂಖ್ಯಾತರ ಕಲ್ಯಾಣ ಇಲಾಖೆಯ ಮೆಟ್ರಿಕ್ ನಂತರ ಬಾಲಕ ಮತ್ತು ಬಾಲಕಿಯರ ವಿದ್ಯಾರ್ಥಿನಿಲಯಗಳ (ಪಿ.ಯು.ಸಿ ಮತ್ತು ಪಿ.ಯು.ಸಿ ಸಮಾನಾಂತರ ಕೋರ್ಸ್, ಸಾಮಾನ್ಯ ಪದವಿ ಮಟ್ಟದ ಕೋರ್ಸ್, ವೃತ್ತಿಪರ ಕೋರ್ಸ್ ಮತ್ತು ಸ್ನಾತಕೊತ್ತರ ಕೋರ್ಸ್ ವಿದ್ಯಾರ್ಥಿಗಳಿಗೆ ಮಾತ್ರ) ಪ್ರವೇಶಕ್ಕಾಗಿ ಈಗಾಗಲೇ ಆನ್‌ಲೈನ್ ಮೂಲಕ ಅರ್ಜಿ ಆಹ್ವಾನಿಸಲಾಗಿದ್ದು, ಅರ್ಜಿ ಸಲ್ಲಿಸುವ ಅವಧಿಯನ್ನು ಜ.10 ರ ವರೆಗೆ ವಿಸ್ತರಿಸಲಾಗಿದೆ.

ಅಭ್ಯರ್ಥಿಗಳು ರಾಜ್ಯ ವಿದ್ಯಾರ್ಥಿನಿಲಯ ತಂತ್ರಾಂಶದ https;//shp.karnataka.gov.in ಮೂಲಕ ಅರ್ಜಿ ಸಲ್ಲಿಸಬಹುದು. ಹೆಚ್ಚಿನ ಮಾಹಿತಿಗಾಗಿ ನಗರದ ಮೌಲಾನ ಅಜಾದ ಭವನದ ಅಲ್ಪಸಂಖ್ಯಾತರ ಕಲ್ಯಾಣ ಇಲಾಖೆಯ ಜಿಲ್ಲಾ ಅಧಿಕಾರಿಗಳ ಕಚೇರಿ ಅಥವಾ ಸಹಾಯವಾಣಿ ಸಂಖ್ಯೆ 8277799990 (24*7) ಗೆ ಸಂಪರ್ಕಿಸಬಹುದು ಎಂದು ಅಲ್ಪಸಂಖ್ಯಾತರ ಕಲ್ಯಾಣ ಇಲಾಖೆಯ ಜಿಲ್ಲಾ ಅಧಿಕಾರಿ ವಿಠೋಬಾ ಹೊನಕಾಂಡೆ ತಿಳಿಸಿದ್ದಾರೆ.

### 2017 ರಿಂದ 2023 ಅವಧಿಯ ಅಭಿವೃದ್ಧಿ ಹಾಗೂ ಪರಿಸರ ಪತ್ರಿಕೋದ್ಯಮ ಪ್ರಶಸ್ತಿಗಳು ಪ್ರಕಟ

# ನಾಡಿನ 32 ಜನ ಹಿರಿಯ ಪತ್ರಕರ್ತರು ಪ್ರಶಸ್ತಿಗೆ ಭಾಜನ

**ಹಂಪಿ ಟೈಮ್ಸ್ ಹೊಸಪೇಟೆ**

ಕರ್ನಾಟಕ ಸರ್ಕಾರವು ಅಭಿವೃದ್ಧಿ ಮತ್ತು ಪರಿಸರ ಪತ್ರಿಕೋದ್ಯಮ ಕ್ಷೇತ್ರಗಳಲ್ಲಿ ವಿಶಿಷ್ಟ ಸಾಧನೆ ಮಾಡಿದ ಪತ್ರಕರ್ತರಿಗೆ ನೀಡುವ 2017 ರಿಂದ 2023ರ ಕ್ಯಾಲೆಂಡರ್ ವರ್ಷಗಳ ಅಭಿವೃದ್ಧಿ ಮತ್ತು ಪರಿಸರ ಪತ್ರಿಕೋದ್ಯಮ ಪ್ರಶಸ್ತಿಗಳನ್ನು ಪ್ರಕಟಿಸಿದೆ ಎಂದು ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆಯ ಆಯುಕ್ತರಾದ ಹೇಮಂತ್ ಎಂ ನಿಂಬಾಳ್ಕರ್ ಅವರು ತಿಳಿಸಿದ್ದಾರೆ.



ಈ ಕುರಿತು ಪ್ರಕಟಣೆ ನೀಡಿರುವ ಅವರು, ಈ ಪ್ರಶಸ್ತಿಗಳನ್ನು ಸರ್ಕಾರವು 2001ನೇ ಸಾಲಿನಿಂದ ಸ್ಥಾಪಿಸಿದ್ದು 2016 ರವರೆಗೆ ನಾಡಿನ 32 ಜನ ಹಿರಿಯ ಪತ್ರಕರ್ತರು ಈ ಎರಡೂ ಪ್ರಶಸ್ತಿಗಳನ್ನು ಸ್ವೀಕರಿಸಿದ್ದಾರೆ. ಕೋವಿಡ್ ಹಾಗೂ ಇತರೆ ಕಾರಣಗಳಿಂದ ವಿಳಂಬವಾಗಿದ್ದ 2017ರಿಂದ 2023ರ ವರೆಗಿನ ಏಳು ವರ್ಷಗಳ ಅವಧಿಯ ಪ್ರಶಸ್ತಿಗಳಿಗೆ ಅರ್ಹ ಪತ್ರಕರ್ತರನ್ನು ಹಿರಿಯ ಪತ್ರಕರ್ತರಾದ ಸನತ್ ಕುಮಾರ್ ಬೆಳಗಲಿ ಹಾಗೂ ಕೆ.ಶಿವಕುಮಾರ್ ಅವರಿದ್ದ ಸಮಿತಿಯು ಆಯ್ಕೆ ಮಾಡಿದೆ. ಪ್ರಶಸ್ತಿಯು ತಲಾ ಒಂದು ಲಕ್ಷ ರೂಪಾಯಿ ನಗದು, ಸ್ಮರಣಿಕೆ, ಅಭಿನಂದನಾ ಪತ್ರ ಒಳಗೊಂಡಿರುತ್ತದೆ.

### 2017ರಿಂದ 2023ರವರೆಗಿನ ಪರಿಸರ ಪತ್ರಿಕೋದ್ಯಮ ಪ್ರಶಸ್ತಿ ಪುರಸ್ಕೃತರ ವಿವರ:

#### ವಿಜಯಲಕ್ಷ್ಮಿ ಶಿಬರೂರು (2017)

ಮೂಲತ: ದಕ್ಷಿಣ ಕನ್ನಡ ಜಿಲ್ಲೆಯ ಶಿಬರೂರು ಗ್ರಾಮದವರಾದ ವಿಜಯಲಕ್ಷ್ಮಿ ಅವರು, ಕಳೆದ ಸುಮಾರು 25 ವರ್ಷಗಳಿಂದ ನಾಡಿನ ವಿವಿಧ ಮಾಧ್ಯಮಗಳಿಗೆ ಸೇವೆ ಸಲ್ಲಿಸುತ್ತಿದ್ದಾರೆ. ಅರಣ್ಯ ಸಂರಕ್ಷಣೆ, ಅಪಾಯಕಾರಿ ಆಹಾರ ಪದಾರ್ಥಗಳು, ಪ್ಲಾಸ್ಟಿಕ್ ಅಪಾಯಗಳು ಮತ್ತಿತರ ಜಾಗೃತಿ ಮೂಡಿಸುವ ವರದಿಗಳನ್ನು ಎಲೆಕ್ಟ್ರಾನಿಕ್ ಹಾಗೂ ಸಾಮಾಜಿಕ ಮಾಧ್ಯಮಗಳ ಮೂಲಕ ಪರಿಣಾಮಕಾರಿಯಾಗಿ ಬಿತ್ತರಿಸಿದ್ದಾರೆ. ಪರಿಸರ ಜಾಗೃತಿಯ ವರದಿಗಳನ್ನು ಪ್ರಕಟಿಸಿದ್ದಾರೆ.

#### ಬಿ.ಎಂ.ಟಿ ರಾಜೀವ್:(2018)

ಮೂಲತ: ತುಮಕೂರು ಜಿಲ್ಲೆಯ ಕುಣಿಗಲ್ ತಾಲ್ಲೂಕಿನ ಬೆನವಾರ ಗ್ರಾಮದವರು, ಉಪ ಅರಣ್ಯ ಸಂರಕ್ಷಣಾಧಿಕಾರಿಯಾಗಿ ಭಾರತೀಯ ಅರಣ್ಯ ಸೇವೆಯಿಂದ 2006ರಲ್ಲಿ ನಿವೃತ್ತಿ ಹೊಂದಿದ್ದಾರೆ. 1985 ರಿಂದ ವನ್ಯಜೀವಿಗಳು, ಅರಣ್ಯ ಮತ್ತು ಪರಿಸರ ಸಂರಕ್ಷಣೆ ಕುರಿತು ಕನ್ನಡ ಮತ್ತು ಆಂಗ್ಲ ಭಾಷೆಗಳಲ್ಲಿ ಲೇಖನ, ಪ್ರಬಂಧಗಳನ್ನು ಬರೆಯುತ್ತಿದ್ದಾರೆ. ಅರಣ್ಯ/ವನ್ಯಜೀವಿ/ಪರಿಸರದಿಂದ ಮನುಕುಲಕ್ಕಿರುವ ಅನುಕೂಲಗಳು, ಅವಶ್ಯಕತೆಗಳ ಬಗ್ಗೆ ಲೇಖನಗಳನ್ನು ಬರೆದಿದ್ದಾರೆ. ಭಾರತೀಯ ವನ್ಯಪ್ರಾಣಿಗಳ ಕೈಪಿಡಿ, ಪರಿಸರ ಮಾಲಿನ್ಯ ಮತ್ತು ವಾಯುಗುಣ ಬದಲಾವಣೆ ಕುರಿತು ಒಟ್ಟು 6 ಪುಸ್ತಕಗಳನ್ನು ಪ್ರಕಟಿಸಿದ್ದಾರೆ.

#### ವಿನೋದಕುಮಾರ್ ಬಿ. ನಾಯ್ಕ:(2019)

ಮೂಲತ: ಚಿಕ್ಕಮಗಳೂರು ಜಿಲ್ಲೆಯ ಕಡೂರು ತಾಲ್ಲೂಕಿನ ಗುಬ್ಬಿಹಳ್ಳಿ ಗ್ರಾಮದವರು. ಏಷಿಯಾನೆಟ್ ಸುವರ್ಣ ನ್ಯೂಸ್ ಸಂಸ್ಥೆಯಲ್ಲಿ ವಿಶೇಷ ಯೋಜನೆಗಳ ವಿಭಾಗದ ಸಂಪಾದಕರಾಗಿರುವ ಇವರು ವಿವಿಧ ಮಾಧ್ಯಮಗಳಲ್ಲಿ ಸುಮಾರು 23 ವರ್ಷಗಳ ಕಾಲ ವನ್ಯಜೀವಿ ಹಾಗೂ ಪರಿಸರ ಕುರಿತು ಅನೇಕ ಪರಿಣಾಮಕಾರಿ ವರದಿಗಳನ್ನು ಮಾಡಿದ್ದಾರೆ. ಕರ್ನಾಟಕ ರಾಜ್ಯ ವನ್ಯಜೀವಿ ಮಂಡಳಿ ಸದಸ್ಯರಾಗಿ ಸೇವೆ ಸಲ್ಲಿಸಿದ್ದಾರೆ. ಪ್ರಾದೇಶಿಕ ಮಾಧ್ಯಮಗಳಲ್ಲಿ ಮೊದಲ ಬಾರಿಗೆ ವನ್ಯಜೀವಿ ಸಂರಕ್ಷಣಾ ಅಭಿಯಾನಗಳನ್ನು ಹಮ್ಮಿಕೊಂಡು ಕಾಡಂಚಿನ ಗ್ರಾಮಗಳಲ್ಲಿ ಮಾನವ-ವನ್ಯಜೀವಿ ಸಂಘರ್ಷ ಕಡಿಮೆ ಮಾಡುವ ನಿಟ್ಟಿನಲ್ಲಿ ಶ್ರಮಿಸುತ್ತಿದ್ದಾರೆ. 'ಜಂಗಲ್ ಡೈರಿ' ಕೃತಿ ಪ್ರಕಟಿಸಿದ್ದಾರೆ.

#### ಮಾಲತೇಶ ಅಂಗೂರ (2020)

ಹಾವೇರಿ ಜಿಲ್ಲೆಯ ಮಾಲತೇಶ ಗದಿಗೆಪ್ಪ ಅಂಗೂರ ಅವರು ಸುಮಾರು 34 ವರ್ಷಗಳಿಂದ ಪತ್ರಿಕೋದ್ಯಮದಲ್ಲಿದ್ದಾರೆ. ಕಳೆದ 18 ವರ್ಷಗಳಿಂದ ಕೌರವ ಕನ್ನಡ ದಿನಪತ್ರಿಕೆಯ ಮುಖ್ಯ ವರದಿಗಾರರಾಗಿ ಪರಿಸರಕ್ಕೆ ಸಂಬಂಧಿಸಿದಂತೆ ವನ್ಯಜೀವಿಗಳು, ಕೆರೆಕಟ್ಟೆಗಳು, ಪ್ರಾಣಿಪಕ್ಷಿಗಳು, ಕೀಟಗಳು, ಸಸ್ಯಗಳು, ನಿಸರ್ಗ, ಗುಡ್ಡ ಗಹ್ವರಗಳು, ಅತಿವೃಷ್ಠಿ ಅನಾವೃಷ್ಠಿ ಸೇರಿದಂತೆ ವಿವಿಧ ಪರಿಸರ ಜಾಗೃತಿಯ ವರದಿಗಳನ್ನು ಪ್ರಕಟಿಸಿದ್ದಾರೆ. 'ಕಾಡು-ಮೇಡು' ಕೃತಿ ಪ್ರಕಟವಾಗಿದೆ.

#### ಸುಧೀರ್ ಶೆಟ್ಟಿ (2021)

ಉಡುಪಿ ಜಿಲ್ಲೆಯ ಪಾದೆಬೆಟ್ಟು ಗ್ರಾಮದವರಾದ ಇವರು ಮುಂಬೈನಲ್ಲಿ ಫೋಟೋ ಜರ್ನಲಿಸಂ ಪದವಿ ಪಡೆದಿದ್ದಾರೆ. ಅರಣ್ಯ, ವನ್ಯಜೀವಿ, ನದಿ ಮತ್ತು ನೀರಿನ ಮೂಲಗಳ ಸಂರಕ್ಷಣೆ, ಬಂಡೀಪುರ ಅರಣ್ಯದ ಪ್ರಾಣಿಗಳ ಪ್ರಾಣ ರಕ್ಷಣೆ, ಬೆಂಗಳೂರಿನ ಕೆರೆಗಳ ನೀರು ತಮಿಳುನಾಡಿಗೆ ಹರಿದುಹೋಗಿ ಅಲ್ಲಿ ಸಂಸ್ಕರಣೆಗೊಂಡು ಕೃಷಿಗೆ ಬಳಕೆಯಾಗುತ್ತಿರುವ ಬಗ್ಗೆ ಸೆರೆಹಿಡಿದ ಛಾಯಾಚಿತ್ರಗಳು ರಾಜ್ಯದಲ್ಲಿ ಚರ್ಚೆ ಉಂಟುಮಾಡಿದ್ದವು. ಗದಗ ಜಿಲ್ಲೆಯ ಕಪ್ಪತ್ತಗುಡ್ಡದ ಸಂರಕ್ಷಣೆ ಸಾಕ್ಷ್ಯಚಿತ್ರ ನಿರ್ಮಿಸಿದ್ದಾರೆ. ಕಪ್ಪತ್ತಗುಡ್ಡ ಸಂರಕ್ಷಣೆಗೆ ಗದುಗಿನ ಡಾ:ತೋಂಟದ ಸಿದ್ದಲಿಂಗ ಮಹಾಸ್ವಾಮಿಗಳು ಹಾಗೂ ಎಸ್.ಆರ್.ಹಿರೇಮಠ ಅವರ ಹೋರಾಟದ ಸಂದರ್ಭದಲ್ಲಿ ಸಾಕ್ಷ್ಯಚಿತ್ರ ಪ್ರದರ್ಶಿಸಿದ್ದರು. ಮಹದಾಯಿ ತಿರುವು ಯೋಜನೆ, ಎತ್ತಿನಹೊಳೆ ಕುಡಿಯುವ ನೀರಿನ ಯೋಜನೆ, ಸಂಡೂರಿನ ಅಕ್ರಮ ಗಣಿಗಾರಿಕೆ ಮತ್ತಿತರ ವಿಷಯಗಳ ಕುರಿತು ಇವರ ಛಾಯಾಚಿತ್ರಗಳು ಪ್ರದರ್ಶನಗೊಂಡಿವೆ.

#### ಮಲ್ಲಿಕಾರ್ಜುನ ಹೊಸಪಾಳ್ಯ (2022)

ಮಲ್ಲಿಕಾರ್ಜುನ ಹೊಸಪಾಳ್ಯ ಅವರು ತುಮಕೂರು ಜಿಲ್ಲೆಯ ಮಧುಗಿರಿ ತಾಲ್ಲೂಕಿನ ಹೊಸಪಾಳ್ಯ ಗ್ರಾಮದವರು. ಪತ್ರಿಕೋದ್ಯಮ ಸ್ನಾತಕೋತ್ತರ ಪದವಿಯಲ್ಲಿ ಮೊದಲ ರಾಂಕ್ ನೊಂದಿಗೆ ಎರಡು ಚಿನ್ನದ ಪದಕ ಮತ್ತು ಪದವಿಯಲ್ಲಿ ಕನ್ನಡ ವಿಷಯದಲ್ಲಿ ಹೆಚ್ಚಿನ ಅಂಕಗಳಿಕೆಗಾಗಿ ಚಿನ್ನದ ಪದಕ ಪಡೆದಿದ್ದಾರೆ. ದೇಸಿ ತಳಿ, ನಾಟಿ ಬೀಜಗಳ ಸಂರಕ್ಷಣೆ ಕುರಿತು ವಿಶೇಷ ಆಸಕ್ತಿ, ಜಲಸಂರಕ್ಷಣೆ, ಸುಸ್ಥಿರ ಕೃಷಿ, ಸಿರಿಧಾನ್ಯ ಚಟುವಟಿಕೆಗಳಿಗೆ ಬೆಂಬಲ. ಜಲಜಾಗೃತಿಗಾಗಿ ಕಾರ್ಯಕ್ರಮ ಸಂಘಟನೆ. ಪಾರಂಪರಿಕ ಜಲನಿಧಿಗಳಾದ ತಲಪರಿಗೆ ಬಗ್ಗೆ ಅಧ್ಯಯನ, ಪುನರುಜ್ಜೀವನಕ್ಕಾಗಿ ಶ್ರಮಿಸುತ್ತಿದ್ದಾರೆ. ಕಳೆದ ಎರಡು ದಶಕಗಳಿಂದ ವಿವಿಧ ಪತ್ರಿಕೆಗಳಲ್ಲಿ ಹವ್ಯಾಸಿ ಬರಹಗಾರರಾಗಿ ಕೃಷಿ ವಿಚಾರಗಳ ಬರವಣಿಗೆ ಮಾಡುತ್ತಿದ್ದಾರೆ. ನೆಟ್ಟಿರಾಗಿ, ತಲಪರಿಗೆ, ನಶಿಸುತ್ತಿರುವ ನೀರಿನ ಜ್ಞಾನ,ಕರ್ನಾಟಕದ ಕೃಷಿ ಆಚರಣೆಗಳು ಸೇರಿ ಒಟ್ಟು 14 ಕೃತಿಗಳು ಪ್ರಕಟವಾಗಿವೆ.

#### ಆರ್.ಮಂಜುನಾಥ್ (ಕೆರೆ ಮಂಜು) (2023)

ಬೆಂಗಳೂರಿನವರಾಗಿರುವ ಆರ್.ಮಂಜುನಾಥ್ ಅವರು, 1995ರಿಂದ ವಿವಿಧ ಮಾಧ್ಯಮಗಳಲ್ಲಿ ಸೇವೆ ಸಲ್ಲಿಸಿರುವ ಇವರು, ಪ್ರಸ್ತುತ ಪ್ರಜಾವಾಣಿಯಲ್ಲಿ ಹಿರಿಯ ವರದಿಗಾರನಾಗಿ ಸೇವೆ ಸಲ್ಲಿಸುತ್ತಿದ್ದಾರೆ. ಬೆಂಗಳೂರಿನ ಕೆರೆಗಳ ಬಗ್ಗೆ 'ನಮ್ಮೂರ್ ಕೆರೆ' ಎಂಬ ಲೇಖನ ಮಾಲಿಕೆ (2008). ಅರ್ಕಾವತಿ ನದಿ ಪುನಶ್ಚೇತನ, ಧಾರವಾಡ ಕೆರೆಗಳ ಅಭಿವೃದ್ಧಿ,ಬೆಂಗಳೂರಿನಲ್ಲಿರುವ ರಾಜಕಾಲುವೆಗಳ ಒತ್ತುವರಿಯಿಂದ ಮಳೆಗಾಲದಲ್ಲಿ ನೀರು ಬಡಾವಣೆಗಳಿಗೆ ಹರಿಯುತ್ತಿದೆ. ಎಲ್ಲೆಲ್ಲಿ ಎಷ್ಟೆಷ್ಟು ರಾಜಕಾಲುವೆ ಒತ್ತುವರಿಯಾಗಿದೆ ಎಂಬುದನ್ನು ನಕ್ಷೆ ಸಹಿತ ಮಾಹಿತಿಯ ಲೇಖನಗಳು ಸೇರಿ ಕೆರೆಗಳ ರಕ್ಷಣೆ ಬಗ್ಗೆ ಪರಿಣಾಮಕಾರಿ ಲೇಖನಗಳನ್ನು ಪ್ರಕಟಿಸಿದ್ದಾರೆ.

### 2017ರಿಂದ 2023 ರವರೆಗಿನ ಅಭಿವೃದ್ಧಿ ಪತ್ರಿಕೋದ್ಯಮ ಪ್ರಶಸ್ತಿ ಪುರಸ್ಕೃತರ ವಿವರ:

#### ಚೀ.ಜ.ರಾಜೀವ್ (2017)

ಚಿಕ್ಕಮಗಳೂರು ಜಿಲ್ಲೆ ಅಜ್ಜಂಪುರ ತಾಲ್ಲೂಕು ಚೀರನಹಳ್ಳಿ ಗ್ರಾಮದವರು. ಪ್ರಸ್ತುತ ಮೈಸೂರಿನಲ್ಲಿ ನೆಲೆಸಿದ್ದಾರೆ. 1999ರಿಂದ 2001ರವರೆಗೆ ಉದಯವಾಣಿ ದಿನಪತ್ರಿಕೆಯಲ್ಲಿ, 2001 ರಿಂದ ಇಲ್ಲಿಯವರೆಗೆ ವಿಜಯ ಕರ್ನಾಟಕ ದಿನಪತ್ರಿಕೆಯ ಸುದ್ದಿ ಸಂಪಾದಕರಾಗಿ ಬೆಂಗಳೂರಿನಲ್ಲಿ ಸೇವೆ ಸಲ್ಲಿಸುತ್ತಿದ್ದಾರೆ. ಕೃಷಿ, ಶಿಕ್ಷಣ, ಪರಂಪರೆ, ಮತ್ತಿತರ ಕ್ಷೇತ್ರಗಳ ಸವಾಲುಗಳಿಗೆ ಕನ್ನಡಿ ಹಿಡಿಯುವ ಅಭ್ಯುದಯ ಪತ್ರಿಕೋದ್ಯಮಕ್ಕೆ ಉದಾಹರಣೆಯಾಗುವಂತಹ ವರದಿ ಅಂಕಣಗಳನ್ನು ನಿರಂತರವಾಗಿ ಪ್ರಕಟಿಸುತ್ತಿದ್ದಾರೆ.

#### ದೇವಯ್ಯ ಗುತ್ತೇದಾರ್ (2018)

ಮೂಲತ: ಕಲಬುರಗಿ ಜಿಲ್ಲೆ ಅಫಜಲಪುರ ತಾಲ್ಲೂಕು ಭೈರಾಮಡಗಿ ಗ್ರಾಮದವರು. 2004ರಿಂದ ಉಷಾಕಿರಣ, ಪ್ರಜಾವಾಣಿಯಲ್ಲಿ ಸೇವೆ ಸಲ್ಲಿಸಿ ಪ್ರಸ್ತುತ ವಿಜಯಕರ್ನಾಟಕ ದಿನಪತ್ರಿಕೆಯ ಕಲಬುರಗಿ ಆವೃತ್ತಿಯ ಸ್ಥಾನಿಕ ಸಂಪಾದಕರಾಗಿದ್ದಾರೆ. ಕಲ್ಯಾಣ ಕರ್ನಾಟಕದ ಅಭಿವೃದ್ಧಿ, ಮಾನವ ಅಭಿವೃದ್ಧಿಯಲ್ಲಿ ಉತ್ತರ ಕರ್ನಾಟಕದ ತಾಲ್ಲೂಕುಗಳ ಪರಿಸ್ಥಿತಿ, ಕಲ್ಯಾಣ ಕರ್ನಾಟಕದ ಜಿಲ್ಲೆಗಳ ಬಡತನ ನಿವಾರಣೆ, ಶಿಶುಮರಣ ತಡೆ ಸೇರಿದಂತೆ ಶಿಕ್ಷಣ, ಆರೋಗ್ಯ, ಅಭಿವೃದ್ಧಿ ಕುರಿತ ಅನೇಕ ವಿಶ್ಲೇಷಾಣಾತ್ಮಕ ಲೇಖನಗಳು, ವರದಿಗಳನ್ನು ಪ್ರಕಟಿಸಿದ್ದಾರೆ.

#### ಗಿರೀಶ್ ಲಿಂಗಣ್ಣ (2019)

ಬೆಂಗಳೂರಿನ ಗಿರೀಶ್ ಲಿಂಗಣ್ಣ ಅವರು ಮೆಕ್ಯಾನಿಕಲ್ ಇಂಜಿನಿಯರಿಂಗ್ ಸ್ನಾತಕೋತ್ತರ ಪದವೀಧರರಾಗಿದ್ದಾರೆ. ಬಾಹ್ಯಾಕಾಶ, ರಕ್ಷಣೆ, ಅಂತಾರಾಷ್ಟ್ರೀಯ ವ್ಯವಹಾರಗಳ ವಿಶ್ಲೇಷಕ. ಸಂಯುಕ್ತ ಕರ್ನಾಟಕ, ಕನ್ನಡ ಪ್ರಭ, ಇಂಡಿಯನ್ ಎಕ್ಸ್‌ಪ್ರೆಸ್ ದಿನಪತ್ರಿಕೆಗಳ ಜಾಲತಾಣಗಳ ಅಂಕಣಕಾರರಾಗಿದ್ದಾರೆ. ವಿಜಯ ಕರ್ನಾಟಕ, ಉದಯವಾಣಿ, ವಿಶ್ವವಾಣಿ, ಪತ್ರಿಕೆಗಳಲ್ಲಿ ಒನ್ ಇಂಡಿಯ ಜಾಲತಾಣದಲ್ಲಿ ನಿರಂತರ ಲೇಖನಗಳನ್ನು ಬರೆಯುತ್ತಿದ್ದಾರೆ. ವಿವಿಧ ರಾಷ್ಟ್ರೀಯ, ಅಂತಾರಾಷ್ಟ್ರೀಯ ಇಂಗ್ಲಿಷ್ ಪತ್ರಿಕೆಗಳು, ನಿಯತಕಾಲಿಕೆಗಳಲ್ಲಿ ಲೇಖನಗಳು ಪ್ರಕಟವಾಗುತ್ತಿವೆ. ಪ್ರಚಲಿತ ವಿಚಾರಗಳ ಕುರಿತು ಸುವರ್ಣ ನ್ಯೂಸ್, ದೂರದರ್ಶನ, ಆಕಾಶವಾಣಿ, ಚಂದನ ವಾಹಿನಿಗಳಲ್ಲಿ ಪ್ಯಾನೆಲಿಸ್ಟ್ ಆಗಿ ಭಾಗಿ. ರಾಷ್ಟ್ರ, ಅಂತಾರಾಷ್ಟ್ರೀಯ ಮಟ್ಟದ ಸುದ್ದಿ ವಾಹಿನಿಗಳಲ್ಲಿ ಸಂವಾದ, ಚರ್ಚೆಗಳಲ್ಲಿ ಪ್ಯಾನೆಲಿಸ್ಟ್ ಆಗಿದ್ದಾರೆ.

#### ಯೋಗೇಶ್ ಎಂ.ಎನ್ (2020)

ಮಂಡ್ಯ ಜಿಲ್ಲೆ ಕೆ.ಆರ್.ಪೇಟೆ ತಾಲ್ಲೂಕು ಮಾರೇನಹಳ್ಳಿ ಗ್ರಾಮದವರು. ಕಳೆದ ಸುಮಾರು 20 ವರ್ಷಗಳಿಂದ ಪತ್ರಿಕೋದ್ಯಮದಲ್ಲಿ ಸೇವೆ ಸಲ್ಲಿಸುತ್ತಿದ್ದಾರೆ. ಪ್ರಸ್ತುತ ಪ್ರಜಾವಾಣಿ ದಿನಪತ್ರಿಕೆಯ ಚಿತ್ರದುರ್ಗ ಜಿಲ್ಲಾ ವರದಿಗಾರರಾಗಿದ್ದಾರೆ. ಭ್ರೂಣಹತ್ಯೆ ತಡೆ, ಉನ್ನತ ಶಿಕ್ಷಣ ಸೇರಿದಂತೆ ಅಭಿವೃದ್ಧಿ ವಿಷಯಗಳ ಕುರಿತು ಪರಿಣಾಮಕಾರಿ ವರದಿಗಳನ್ನು ಪ್ರಕಟ ಮಾಡಿದ್ದಾರೆ. 'ಜೀವಸೆಲೆ ಕಾಮೇಗೌಡ' ಕೃತಿಯು ಮಂಡ್ಯ ವಿಶ್ವವಿದ್ಯಾಲಯಕ್ಕೆ ಪಠ್ಯವಾಗಿದೆ. ಸಕ್ಕರೆಯ ಅಕ್ಕರೆ, ವರ್ಣ ಕೃತಿಗಳು ಪ್ರಕಟವಾಗಿವೆ. ಭಾರತೀಯ ರಂಗ ಶಿಕ್ಷಣ ಕೇಂದ್ರದಲ್ಲಿ ತರಬೇತಿ ಪಡೆದಿದ್ದಾರೆ. ವಿವಿಧ ಹವ್ಯಾಸಿ ನಾಟಕಗಳಲ್ಲಿ ಅಭಿನಯಿಸಿದ್ದಾರೆ.

#### ನೌಶಾದ್ ಬಿಜಾಪುರ (2021)

ಮೂಲತ: ಧಾರವಾಡದವರು. ಪ್ರಸ್ತುತ ಬೆಳಗಾವಿಯಲ್ಲಿ ನೆಲೆಸಿದ್ದು, ದಿ ನ್ಯೂ ಇಂಡಿಯನ್ ಎಕ್ಸ್‌ಪ್ರೆಸ್ ದಿನಪತ್ರಿಕೆಯ ಹಿರಿಯ ಸಹಾಯಕ ಸಂಪಾದಕರಾಗಿದ್ದಾರೆ. ಕಳೆದ 25 ವರ್ಷಕ್ಕೂ ಹೆಚ್ಚು ಕಾಲದಿಂದ ಡೆಕ್ಕನ್ ಕ್ರೋನಿಕಲ್, ಡೆಕ್ಕನ್ ಹೆರಾಲ್ಡ್, ಇಂಡಿಯನ್ ಎಕ್ಸ್‌ಪ್ರೆಸ್ ಪತ್ರಿಕೆಗಳಲ್ಲಿ ಸೇವೆ ಸಲ್ಲಿಸಿ ಈಗ ದಿ ನ್ಯೂ ಇಂಡಿಯನ್ ಎಕ್ಸ್‌ಪ್ರೆಸ್ ದಿನಪತ್ರಿಕೆಯಲ್ಲಿ ಹಲವಾರು ಅಭಿವೃದ್ಧಿ ಮತ್ತು ಸಾಮಾಜಿಕ ಚಿಂತನೆಗಳಿಂದ ಕೂಡಿದ ಲೇಖನ ಹಾಗೂ ವರದಿಗಳನ್ನು ಪ್ರಕಟಿಸಿದ್ದಾರೆ.

#### ಸತೀಶ್ ಜಿ.ಟಿ (2022)

ಮೂಲತ: ಚಿತ್ರದುರ್ಗದವರು. ಮೈಸೂರು ವಿಶ್ವವಿದ್ಯಾನಿಲಯದಿಂದ ಇಂಗ್ಲೀಷ್ ಸಾಹಿತ್ಯದಲ್ಲಿ ಸ್ನಾತಕೋತ್ತರ ಪದವಿ ಪಡೆದಿದ್ದಾರೆ. 2004ರಿಂದ 2011ರವರೆಗೆ ವಿಜಯ ಟೈಮ್ಸ್, ಡೆಕ್ಕನ್ ಹೆರಾಲ್ಡ್ ಪತ್ರಿಕೆಗಳಲ್ಲಿ ಹಿರಿಯ ವರದಿಗಾರರಾಗಿ ಸೇವೆ ಸಲ್ಲಿಸಿದ್ದಾರೆ. 2011 ರಿಂದ ಈವರೆಗೆ ದಿ ಹಿಂದೂ ದಿನಪತ್ರಿಕೆಯ ಹಾಸನ ವಿಭಾಗದ ವಿಶೇಷ ವರದಿಗಾರರಾಗಿ ಕಾರ್ಯ ನಿರ್ವಹಿಸುತ್ತಿದ್ದಾರೆ. ಅಭಿವೃದ್ಧಿಯ ವಿವಿಧ ಆಯಾಮಗಳ ಮೇಲೆ ಬೆಳಕು ಚೆಲ್ಲುವ ಅನೇಕ ವರದಿಗಳನ್ನು ಪ್ರಕಟಿಸಿದ್ದಾರೆ. ವಿನೋದ್ ಮೆಹ್ತಾ ಅವರ ಆತ್ಮಕಥೆ 'ಲಖನೌ ಹುಡುಗ', ವಿನೋದ್ ಕಾಪ್ರಿ ಅವರ 'ಮನೆ ಸೇರಲು 1232 ಕಿ.ಮೀ ಸಾಗಿದ ದೂರ', ನ್ಯಾಯಮೂರ್ತಿ ಕೆ.ಚಂದ್ರು ಅವರ 'ನನ್ನ ದೂರು ಕೇಳಿ ಮಹಿಳೆಯರು ನ್ಯಾಯಾಲಯದ ಕದ ತಟ್ಟಿದಾಗ' ಅಜಿತ್ ಪಿಳ್ಳೆ ಅವರ 'ಇದು ಯಾವ ಸೀಮೆ ಚರಿತ್ರೆ' ಮೊದಲಾದ ಕೃತಿಗಳನ್ನು ಕನ್ನಡಕ್ಕೆ ಅನುವಾದಿಸಿದ್ದಾರೆ.

#### ಎಸ್.ಗಿರೀಶ್ ಬಾಬು (2023)

ಬೆಂಗಳೂರಿನವರಾದ ಎಸ್.ಗಿರೀಶ್ ಬಾಬು ಅವರು ಉದಯಟಿವಿ, ವಿಜಯಕರ್ನಾಟಕ , ಉದಯವಾಣಿ, ಮತ್ತಿತರ ಮಾಧ್ಯಮಗಳಲ್ಲಿ 27 ವರ್ಷಗಳಿಂದ ಸೇವೆ ಸಲ್ಲಿಸುತ್ತಿದ್ದಾರೆ. ಪ್ರಸ್ತುತ ಕನ್ನಡಪ್ರಭ ದಿನಪತ್ರಿಕೆಯ ಕಾರ್ಯನಿರ್ವಾಹಕ ಸಂಪಾದಕರಾಗಿ ಸೇವೆ ಸಲ್ಲಿಸುತ್ತಿದ್ದಾರೆ. ಬೆಳಗಾವಿಯಲ್ಲಿ ವರದಿಗಾರರಾಗಿ ಕಾರ್ಯ ನಿರ್ವಹಿಸುವ ಅವಧಿಯಲ್ಲಿ ಕೊಕಟನೂರು ಜಾತ್ರೆಯಲ್ಲಿ ಮುತ್ತುಕಟ್ಟುವ (ದೇವದಾಸಿ) ಪದ್ಧತಿ ಬಗ್ಗೆ ಬರೆದ ವರದಿಯು ಈ ಸಾಮಾಜಿಕ ಅನಿಷ್ಠದ ನಿರ್ಮೂಲನೆಗೆ ನೆರವಾಯಿತು. ಶಿಕ್ಷಣ, ಆರೋಗ್ಯ, ಪರಿಸರ , ರಕ್ಷಣೆ, ವಿಜ್ಞಾನ, ತಂತ್ರಜ್ಞಾನ ಬೀಟ್ಗಳಲ್ಲಿ ನೂರಾರು ವರದಿಗಳನ್ನು ಪ್ರಕಟಿಸಿದ್ದಾರೆ. ಭಾರತೀಯ ರಕ್ಷಣಾ ಇಲಾಖೆಯು ಪತ್ರಕರ್ತರಿಗಾಗಿ ನಡೆಸುವ ಡಿಫೆನ್ಸ್ ಕರೆಸ್ಪಾಂಡೆನ್ಸ್ ಕೋರ್ಸ್‌ನಲ್ಲಿ ಭಾಗವಹಿಸಿ ಕಾರ್ಗಿಲ್, ಲೇಹ್ ಸೇರಿದಂತೆ ಮತ್ತಿತರ ಪ್ರದೇಶಗಳಿಗೆ ಭೇಟಿ ನೀಡಿ ವರದಿ ಮಾಡಿರುತ್ತಾರೆ. ಶೀಘ್ರದಲ್ಲಿಯೇ ಪ್ರಶಸ್ತಿ ಪ್ರದಾನ ಸಮಾರಂಭವನ್ನು ಆಯೋಜಿಸಲಾಗುವುದು ಎಂದು ಪ್ರಕಟಣೆಯಲ್ಲಿ ತಿಳಿಸಿದೆ.

## ಸೌಹಾರ್ದ ಬ್ಯಾಂಕ್‌ಗಳು ಸಾಮಾನ್ಯ ವ್ಯಾಪಾರಿಗಳಿಗೆ ಸಹಕಾರಿ : ಮಹೇಶ್ವರ ಸ್ವಾಮೀಜಿ

**ಹಂಪಿ ಟೈಮ್ಸ್ ಹಗರಿಬೊಮ್ಮನಹಳ್ಳಿ.**

ಸೌಹಾರ್ದ ಸಹಕಾರಿ ದಿನಾಚರಣೆ ಅಂಗವಾಗಿ ಪಟ್ಟಣದ ಶ್ರೀ ನಂದೀಶ್ವರ ವಿವಿದೋದ್ದೇಶ ಸೌಹಾರ್ದ ಸಹಕಾರಿ ಸಂಘ ನಿ ಕಛೇರಿಯ ಆವರಣದಲ್ಲಿ 'ಉತ್ತಮ ಸೌಹಾರ್ದ ಸಹಕಾರಿ' ಪ್ರಶಸ್ತಿ ಪುರಸ್ಕೃತ ಸುಕ್ಷೇತ್ರ ಮಹೇಶ್ವರ ಸ್ವಾಮೀಜಿ ಧ್ವಜಾರೋಹಣವನ್ನು ನೇರವೇರಿಸಿದರು.

ಧ್ವಜಾರೋಹಣ ನಂತರ ಮಾತನಾಡಿದ ಅವರು ಕಳೆದ 25 ವರ್ಷಗಳ ಹಿಂದೆ ಖಾಸಗಿ ಹಣಕಾಸು ಲೇವಾದೇವಿ ಸಂಸ್ಥೆಗಳ ಅರ್ಭಟವನ್ನು ನಿಧಾಣವಾಗಿ ಹೋಗಲಾಡಿಸು ವಲ್ಲಿ ಸೌಹಾರ್ದ ಬ್ಯಾಂಕ್‌ಗಳ ಪಾತ್ರ ತನ್ನ ಮಹತ್ವ ಪೂರ್ಣವನ್ನು ಪಾತ್ರವನ್ನು ವಹಿಸಿತ್ತು. ಜನ ಸಮಾನ್ಯರ, ಸಣ್ಣ ವ್ಯಾಪಾರಿಗಳಿಗೆ ಸಹಕಾರಿಯಾಗಿರುವ ಸೌಹಾರ್ದ ಬ್ಯಾಂಕ್‌ಗಳು ರಜತ ಮಹೋತ್ಸವವನ್ನು ಆಚರಿಸಿಕೊಳ್ಳುತ್ತಿ ರುವುದು ಹೆಮ್ಮೆಯ ಸಂಗತಿಯಾಗಿದೆ. ಜನ ಸಾಮಾನ್ಯರ ರೂಪಗೊಂಡ ಸೌಹಾರ್ದ ಚಳುವಳಿಯನ್ನು ಬಲಪಡಿಸಲು ಸರ್ಕಾರ ಯೋಚಿಸುವುದು ಸೂಕ್ತವೆಂದರು.

ಈ ಸಂದರ್ಭದಲ್ಲಿ ಬ್ಯಾಂಕ್‌ನ ಅಧ್ಯಕ್ಷ ಎನ್.ವೆಂಕಣ್ಣ, ಸಹಕಾರಿಯ ಮುಖ್ಯಕಾರ್ಯ ನಿರ್ವಹಕ ಅಧಿಕಾರಿ ಜಿ.ಕೆ.ನಾಗಭೂಷಣ ಹಾಗೂ ಸಂಸ್ಥೆಯ ಸಿಬ್ಬಂದಿಗಳಾದ ವಿನೋದ, ಸುಮಾ,ಸುಷ್ಮಾ, ಪಿಗ್ಮಿ ಸಂಗ್ರಹಕಾರರು ಎ.ಕರಿಬಸವನಗೌಡ, ಟಿ.ಮಂಜುನಾಥ, ಹೆಚ್.ಎಂ. ಕೊಟ್ರೇಶ,ದೇವರಾಜ್, ಕುಮಾರಸ್ವಾಮಿ,ಇತರೆ ಬ್ಯಾಂಕಿನ ಗ್ರಾಹಕರು ಹಾಜರಿದ್ದರು.



• Admissions
• Requirements
• Firm Branding
• Public Notice
• Change of Name
BOOK NOW!
Book Your Advertisements in Leading Local HAMPI TIMES Print & Digital News Paper
9482599089 / 9448633038
• Obituary
• Remembrance
• Birthday wish ads
• Events Display &
• Classified ads
SHUBHA Ads C/o HAMPI TIMES, Bamboo Bazaar, Nr Valmiki Circle, Hosapete-583201 Vijayanagara Dist.